ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪತ್ರಿಕೆ

ಸಂಪುಟ 10 ಸಂಚಿಕೆ 17 ಏಪ್ರಿಲ್ 24, 1988 ಬೆಲೆ: 1-00

ಒಳಗಿನ ಪುಟಗಳಲ್ಲಿ

ಪೊಲಿಟ್‌ಬ್ಯೂರೋ ಸಭೆ ಮಾರ್ಚ್ 29-30

ಐಕ್ಯ ಕಾರ್ಯಾಚರಣೆ ಮುಂದುವರಿಸಲು ಕರೆ

ಸಿ.ಪಿ.ಐ. (ಎಂ)ನ ಕೇಂದ್ರ ಸಮಿತಿಯ ಪೊಲಿಟ್ ಬ್ಯೂರೋ ಮಾರ್ಚ್ 29-30ರಂದು ಸಭೆ ಸೇರಿ ಮಾರ್ಚ್ 15 ಬಂದ್ ಹಿನ್ನೆಲೆಯಲ್ಲಿ ದೇಶದ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚಿಸಿ ಈ ಬಗ್ಗೆ ಪಕ್ಷದ ನಿಲುವುಗಳ ಮೇಲೆ ಪತ್ರಿಕಾ ಹೇಳಿಕೆ ನೀಡಿದೆ.

ಶ್ರೀಲಂಕಾ ಒಪ್ಪಂದ ಜಾರಿಗೊಳಿಸಿ

ಶ್ರೀಲಂಕಾದಲ್ಲಿ ಭಾರತೀಯ ಶಾಂತಿ ಪಡೆಗಳ ಕೆಲಸ ಇನ್ನೂ ಮುಗಿಯದಿರುವುದು, ಭಾರತೀಯ ಸೈನಿಕರ ಮತ್ತು ಶ್ರೀಲಂಕಾದ ಸಾಮಾನ್ಯ ಜನರ ದಿನನಿತ್ಯದ ಸಾವು ನೋವು ಆತಂಕಕಾರಿಯಾಗಿದೆ. LTTE ಶ್ರೀಲಂಕಾ—ಭಾರತ ಒಪ್ಪಂದವನ್ನು ಮನ್ನಿಸಿ ಶಸ್ತ್ರತ್ಯಾಗ ಮಾಡಿ ಮಾತುಕತೆಗೆ ಇನ್ನೂ ತಯಾರಿದ್ದಂತಿಲ್ಲ. ಇದರ ಬದಲು ಅದು ಇತರ ತಮಿಳು ಗುಂಪುಗಳ ಮೇಲೆ ಮತ್ತು ಪೂರ್ವ ಪ್ರಾಂತ್ಯದ ಶೇಕಡಾ 30ರಷ್ಟು ಇರುವ ತಮಿಳು, ಮುಸ್ಲಿಮರ ಮೇಲೆ ಹಿಂಸಾಚಾರ ಮುಂದುವರೆಸಿದೆ. ಆದರೂ ಶಸ್ತ್ರತ್ಯಾಗ ಮತ್ತು ಶ್ರೀಲಂಕಾ-ಭಾರತ ಒಪ್ಪಂದ ಮನ್ನಣೆಯ ಆಧಾರದ ಮೇಲೆ LTTE ಜತೆ ಮಾತುಕತೆಗೆ ಸರಕಾರ ಹಿಂಜರಿಯಬಾರದು. ಈ ರೀತಿ ಮಾತ್ರವೇ ಶಾಂತಿಯ ಕೆಲಸ ಮುಗಿಸಿ ಭಾರತದ ಪಡೆಗಳು ಹಿಂದಿರುಗಲು ಸಾಧ್ಯ. ಶ್ರೀಲಂಕಾ ಮತ್ತು ಭಾರತಗಳಲ್ಲಿ ಸಾಮ್ರಾಜ್ಯಶಾಹಿ ಪಿತೂರಿಯನ್ನು ಕಡೆಗಣಿಸಿ, ಪ್ರಸಕ್ತ ಆತಂಕಕಾರಿ ಪರಿಸ್ಥಿತಿಯ ದುರ್ಲಾಭ ಪಡೆದು ಭಾಷಾ-ಪ್ರಾಂತ್ಯ ದುರಭಿಮಾನವನ್ನು ಕೆರಳಿಸುವ ಕೆಲವು ಬೇಜವಾಬ್ದಾರಿ ವ್ಯಕ್ತಿಗಳ-ಪಕ್ಷಗಳ ಪ್ರಯತ್ನವನ್ನು ಪಿ.ಬಿ. ಖಂಡಿಸುತ್ತದೆ.

ಡಾರ್ಜಿಲಿಂಗ್ ಐಕ್ಯತೆ ಉಳಿಸಲು ಹೋರಾಟ

ಡಾರ್ಜಿಲಿಂಗ್‌ನಲ್ಲಿ ನೆರೆಯ ದೇಶ ನೇಪಾಳದಿಂದ ಬರುತ್ತಿರುವ ಶಸ್ತ್ರಾಸ್ತ್ರಗಳ ಗುಣಮಟ್ಟ ಹೆಚ್ಚುತ್ತಿದ್ದು, ಇದಕ್ಕೆ ಅನುಗುಣವಾಗಿ GNLF ಕಾರ್ಯಕರ್ತರ ಹಿಂಸಾಚಾರ ಆತಂಕಕಾರಿಯಾಗಿ ಹೆಚ್ಚಿದೆ. ದಿನೇ ದಿನೇ ಡಾರ್ಜಿಲಿಂಗ್ ಚಳುವಳಿಯಲ್ಲಿ ಪ್ರತ್ಯೇಕತಾ ಸ್ವರೂಪ ಹೆಚ್ಚುತ್ತಿದ್ದು, ಘೀಸಿಂಗ್ ಸ್ವತಃ ತನ್ನ ಹಿಂಬಾಲಕರ ಹಿಂಸಾಚಾರದ ಜವಾಬ್ದಾರಿ ನಿರಾಕರಿಸಲು ಹೆದರುತ್ತಿದ್ದಾನೆ. ಇದರ ಬದಲು ಆತ ಅದನ್ನು ಪೊಲೀಸರ ಬಲ ಪ್ರಯೋಗಕ್ಕೆ ವಿರುದ್ಧವಾಗಿ ಕಾರ್ಯಕರ್ತರ ಹಿಂಸಾಚಾರ ಎಂದು ಸಮರ್ಥಿಸಿಕೊಳ್ಳುತ್ತಿದ್ದಾನೆ—— ಎಲ್ಲಾ ಪ್ರತಿಗಾಮಿ ನಾಯಕರಂತೆ.

ಈ ಪರಿಸ್ಥಿತಿ ಉಂಟಾಗಲು ಕೇಂದ್ರ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳ ನಡುವೆ ಭೇದೋಪಾಯ ಹೂಡಿ ತನಗೆ ಅನುಕೂಲಕರವಾದ ಪರಿಸ್ಥಿತಿ ನಿರ್ಮಿಸಲು ಸಾಧ್ಯವಿದೆ ಎಂಬ ಅಭಿಪ್ರಾಯ ಘೀಸಿಂಗ್‌ಗೆ ಕೊಟ್ಟ ಕೇಂದ್ರ ಸರ್ಕಾರವೇ ಹೊಣೆ. ದೇಶದ ಐಕ್ಯತೆ ಉಳಿಸಲು ವೀರಾವೇಶದಿಂದ ಹೋರಾಟ ಮಾಡಿ ಪ್ರಾಣವನ್ನರ್ಪಿಸಿರುವ ಮತ್ತು ಯಾವುದೇ ಕಷ್ಟನಷ್ಟಗಳನ್ನು ಲೆಕ್ಕಿಸದೆ ಹೋರಾಡುತ್ತಿರುವ ಪಕ್ಷದ ಕಾರ್ಯಕರ್ತರನ್ನು ಪಿ.ಬಿ. ಅಭಿನಂದಿಸುತ್ತದೆ. ದೇಶದ ಐಕ್ಯತೆಗಾಗಿ ಹೋರಾಡುತ್ತಿರುವ ಜವಾನರ ತ್ಯಾಗವನ್ನು ಸ್ಮರಿಸುತ್ತದೆ. ಡಾರ್ಜಿಲಿಂಗ್ ಜಿಲ್ಲೆಯ ಜನರ ಆಶೋತ್ತರಗಳನ್ನು ಈಡೇರಿಸಲು ಎಡರಂಗ ಸರ್ಕಾರ ಗುಡ್ಡಪ್ರದೇಶ ಅಭಿವೃದ್ಧಿ ಕೌನ್ಸಿಲ್ ಮಸೂದೆ ತಂದಿದ್ದು, ಇದು ವಿದೇಶಿ ಪಿತೂರಿಗಾರರಿಗೆ ತಮ್ಮ ಆತ್ಮಸಾಕ್ಷಿಯನ್ನು ಮಾರಿಕೊಂಡಿರುವ ದೇಶದ್ರೋಹಿಗಳನ್ನು ಪ್ರತ್ಯೇಕಿಸಲು ಸಾಧ್ಯವಾಗಬೇಕು. ಇದರಿಂದ ಸಾಮಾನ್ಯ ಪರಿಸ್ಥಿತಿಯನ್ನು ಜಿಲ್ಲೆಗೆ ತರಲು ಸಾಧ್ಯವಾದೀತು ಎಂದು ಪಿ.ಬಿ. ಆಶಿಸುತ್ತದೆ.

ಪಂಜಾಬ್: ಕೇಂದ್ರದ ಶರಣಾಗತಿ ನಾಚಿಕೆಗೇಡು.

ಪಂಜಾಬಿನಲ್ಲಿ ಪ್ರತ್ಯೇಕತಾವಾದ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ಎದುರಿನಲ್ಲಿ ಕೇಂದ್ರ ಸರ್ಕಾರ ಶರಣಾಗತಿಯನ್ನು ಪಿ.ಬಿ. ಅತ್ಯಂತ ತೀವ್ರವಾಗಿ ಖಂಡಿಸುತ್ತದೆ. ಖಲಿಸ್ತಾನ ಘೋಷಣೆಯನ್ನು ಎಬ್ಬಿಸಿ, ಅದನ್ನು ಬೆಂಬಲಿಸಿಕೊಂಡು ಬಂದ ಶಕ್ತಿಗಳ ಮುಂದೆ ಶರಣಾಗತಿ, ಕೇಂದ್ರ ಸರ್ಕಾರಕ್ಕೆ ಅತ್ಯಂತ ನಾಚಿಕೆಗೇಡಿನ ಸಂಗತಿ. ಈ ಸರ್ಕಾರ ತನ್ನ ಅಧಿಕಾರ ಮುಂದುವರೆಸಲು ದೇಶದ ಸಮಗ್ರತೆ ಮತ್ತು ಗೌರವವನ್ನು ಹರಾಜು ಹಾಕಲು ಹೇಸುವುದಿಲ್ಲ.

ಸರ್ಕಾರದ ಈ ಶರಣಾಗತಿಯ ನೀತಿಯ ಫಲವಾಗಿ ದಿನೇ ದಿನೇ ನಿರುಪಾಯ ಜನರ ನರಮೇಧ ನಡೆಯುತ್ತಿರುವಾಗ, ಸರ್ಕಾರ ಷಂಡರಂತೆ ನಿರ್ಲಜ್ಜವಾಗಿ ನೋಡುತ್ತಿದೆ. ಜನರು ಹಿಂದೆಂದಿಗಿಂತಲೂ ಪ್ರಬಲವಾಗಿ ಐಕ್ಯತೆಗೆ ಬೆಂಬಲಿಸುತ್ತಿದ್ದಾರೆ. ಹೋಳಿ ಹಬ್ಬದ ದಿವಸ ಭಯೋತ್ಪಾದಕರು ಅವರಿಗೆ ಬೇಕಾದ ಜನರನ್ನು ಪ್ರತ್ಯೇಕಿಸಿ ಬಲಿಪಶು ಮಾಡುವ ಪ್ರಯತ್ನಕ್ಕೆ ಯಶಸ್ವಿಯಾಗಿ ತಡೆಒಡ್ಡಲಾಗಿದೆ. ಜನರ ಈ ಉತ್ಸಾಹವನ್ನು ಭಯೋತ್ಪಾದಕರನ್ನು ಎದುರಿಸುವ ಬಗ್ಗೆ ಬಡೆಯುವ ಪ್ರಬಲ ಶಕ್ತಿಯಾಗಿ ಮಾರ್ಪಡಿಸಲು ಸಾಧ್ಯವಿದೆ.

ಆದರೆ ರಾಜೀವ ಸರ್ಕಾರಕ್ಕೆ ಭಯೋತ್ಪಾದಕರಿಗಿಂತ ಜನರ ಐಕ್ಯ ಕಾರ್ಯಾಚರಣೆಯಲ್ಲೇ ಹೆಚ್ಚಿನ ಅಪಾಯ ಕಾಣುತ್ತಿದೆ. ಎಲ್ಲಾ ಪಕ್ಷಗಳ ಸಭೆ ಕರೆಯಬೇಕೆಂಬ ಸಿ.ಪಿ.ಎಂ. ಸಲಹೆಯನ್ನು ಅದು ನಿರಾಕರಿಸಿದೆ. ರಾಜೀವ-ಲೊಂಗೋವಾಲ್ ಒಪ್ಪಂದದ ಆಧಾರದ ಮೇಲೆ, ಜೋಧಪುರ ಬಂದಿಗಳನ್ನೆಲ್ಲಾ ಬಿಡುಗಡೆ ಮಾಡಿ 1984ರ ದೆಹಲಿ ದಂಗೆಗಳಿಗೆ ಕಾರಣರಾದವರನ್ನು ಶಿಕ್ಷಿಸುವ ಮೂಲಕ ಮಾತ್ರ ಪಂಜಾಬ್ ಸಮಸ್ಯೆ ಪರಿಹಾರ ಸಾಧ್ಯ.

59ನೇ ತಿದ್ದುಪಡಿ: ವಿರೋಧಿಸಿ

59ನೇ ತಿದ್ದುಪಡಿ ಪಂಜಾಬ್ ಪರಿಸ್ಥಿತಿಗೆ ಬೇಕಾಗಿಲ್ಲ. ಪಂಜಾಬಿನಲ್ಲಿ ಬೇಕಾಗಿರುವುದು ಜನರ ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸುವುದಲ್ಲ. ಭಯೋತ್ಪಾದಕರ ಸ್ವಾತಂತ್ರ್ಯ ಹರಣ ಅಗತ್ಯ. ಪಂಜಾಬಿನಲ್ಲಿ ತುರ್ತು ಪರಿಸ್ಥಿತಿಯ ನೆವದಲ್ಲಿ ಈಗಿನ ಲೋಕಸಭೆಯ ಅವಧಿ ಹೆಚ್ಚಿಸುವ ಕುತಂತ್ರದ ಅನುಮಾನವಿದೆ. 59ನೇ ತಿದ್ದುಪಡಿಯನ್ನು ಸರ್ಕಾರ ಉಪಯೋಗಿಸಲು ಸಾಧ್ಯವಾಗದ ರೀತಿಯಲ್ಲಿ ಪ್ರಚಾರ ಪ್ರಕ್ಷೋಭೆ ಕೈಗೊಳ್ಳಬೇಕೆಂದು ಪಿ.ಬಿ. ಕರೆ ನೀಡುತ್ತದೆ.

ತ್ರಿಪುರಾ: ನಿರಂಕುಶ ದಮನ

ಪಂಜಾಬಿನಂತೆ, ತ್ರಿಪುರಾದಲ್ಲೂ ಕೇಂದ್ರ ಮತ್ತು ರಾಜ್ಯ ಕಾಂಗ್ರೆಸ್ ಸರ್ಕಾರಗಳು ದೇಶದ ಐಕ್ಯತೆಯ ಪರ ಶಕ್ತಿಗಳ ವಿರುದ್ಧ TNV ಭಯೋತ್ಪಾದಕರನ್ನು ಉಪಯೋಗಿಸುತ್ತೇವೆ. ಕಾಂಗ್ರೆಸ್ ಮುಖ್ಯಮಂತ್ರಿ TNV ಜತೆ ಒಪ್ಪಂದಕ್ಕೆ ಸಿದ್ಧರಾಗಿದ್ದಾರೆ.

ಸಿಪಿಐ (ಎಂ) ಕಾರ್ಯಕರ್ತರು, ಬೆಂಬಲಿಗರು, ನಾಯಕರ ಮೇಲೆ ರಾಜ್ಯ ಸರ್ಕಾರ ಹರಿಬಿಟ್ಟಿರುವ ನಿರಂಕುಶ ದಮನ - ಬಂಧನಗಳು, ಸುಳ್ಳು ಕ್ರಿಮಿನಲ್ ಮೊಕದ್ದಮೆಗಳ (ಅದರಲ್ಲೂ TNV ಜತೆ ಶಾಮೀಲಾದ ಬಗ್ಗೆ !) ನ್ನು ಪಿ.ಬಿ. ಬಲವಾಗಿ ಖಂಡಿಸುತ್ತದೆ. ಇದನ್ನು ನಿರ್ಭಯವಾಗಿ ಎದುರಿಸುತ್ತಿರುವ ತ್ರಿಪುರಾದ-ಅದರಲ್ಲೂ ಆದಿವಾಸಿ-ಜನರನ್ನು ಅಭಿನಂದಿಸುತ್ತಾ ಪಕ್ಷದ ಎಲ್ಲಾ ರಾಜ್ಯ ಘಟಕಗಳು ಎಡ ಪಕ್ಷಗಳು ಮತ್ತಿತರ ವಿರೋಧ ಪಕ್ಷಗಳು ಈ ದಮನದ ವಿರುದ್ಧ ಹೋರಾಟ ನಡೆಸಬೇಕೆಂದು ಪಿ.ಬಿ. ಕರೆ ನೀಡುತ್ತದೆ.

ಕೇರಳ ವಿದ್ಯಮಾನಗಳು

ಜನವರಿಯಲ್ಲಿ ಪಂಚಾಯತು ಚುನಾವಣೆಗಳಲ್ಲಿ ಎಡ-ಪ್ರಜಾರಂಗ ಎಲ್ಲಾ ಜಾತಿವಾದಿ, ಕೋಮುವಾದಿ ಶಕ್ತಿಗಳ ಐಕ್ಯಬಲವನ್ನು ಎದುರಿಸಿ ಹೋರಾಟ ನಡೆಸಿತು. ಚುನಾವಣೆಯಾದ ಕೂಡಲೇ ಎಡ ಪ್ರಜಾರಂಗದ ಶಕ್ತಿ ವಿಧಾನಸಭೆಗಿಂತ ಕುಗ್ಗಿದೆ, ಎಂಬ ಬೂರ್ಜ್ವಾ ಪತ್ರಿಕೆಗಳ 'ವರದಿ' ನಿರಾಧಾರವೆಂದು ಈಗ ಸಿದ್ಧವಾಗಿದೆ. ಗ್ರಾಮ ಪಂಚಾಯತುಗಳ ಅಧ್ಯಕ್ಷರ ಚುನಾವಣೆಗಳು ಮುಗಿದಿದ್ದು ಅದರಲ್ಲಿ ಆಳುವ ರಂಗ ನಿಚ್ಚಳ ಬಹುಮತ ಗಳಿಸಿದೆ.

ಈ ರೀತಿ ಜನರ ಹೆಚ್ಚಿದ ಬೆಂಬಲದಿಂದ, ವಿರೋಧಿ ರಂಗದ ಹಲವು 'ಚಳುವಳಿ'ಗಳನ್ನು ಎಡ ಪ್ರಜಾರಂಗ ಸೋಲಿಸಲು ಸಾಧ್ಯವಾಗಿದ್ದರೂ ಆತಂಕಕಾರಿ ಆರ್ಥಿಕ ಪರಿಸ್ಥಿತಿ ಮತ್ತು ಕೇಂದ್ರ ಸರ್ಕಾರ ಅದನ್ನು ದುರುಪಯೋಗಿಸುತ್ತಿರುವುದು ಸರ್ಕಾರದ ಕಾಲ್ತೊಡಕು.

ಕೇಂದ್ರದ ಪ್ರಸಕ್ತ ಆರ್ಥಿಕ ಬಿಕ್ಕಟ್ಟಿಲ್ಲದೆ ಹಿಂದಿನ UDF ಸರ್ಕಾರಕ್ಕೆ ಉದಾರವಾಗಿ ಕೊಟ್ಟ ಸಾಲದ ಮಾಸಿಕ ಮರುಪಾವತಿಗೆ ಈಗ ಕಠಿಣ ಕಟ್ಟಳೆಗಳನ್ನು ಹೊರಿಸಿರುವುದು ಈಗಿನ ರಾಜ್ಯದ ಆರ್ಥಿಕ ಬಿಕ್ಕಟ್ಟಿಗೆ ಕಾರಣ.

ಮೊನ್ನೆವರೆಗೆ ಕೇಂದ್ರ ಸಚಿವರಾಗಿದ್ದವರನ್ನು ಗವರ್ನರ ಆಗಿ ನೇಮಿಸಿದ್ದು ಅವರು ಸರ್ಕಾರಕ್ಕೆ ಕಾಲ್ತೊಡಕುಗಳನ್ನು ಉಂಟುಮಾಡಿರುವ ಕಾರ್ಯಚರಣೆಗಳನ್ನು, ಪಿ. ಬಿ. ಗವರ್ನರ್ ಸ್ಥಾನದ ಅತ್ಯಂತ ನಿರ್ಲಜ್ಜ ದುರುಪಯೋಗ ಎಂದು ಭಾವಿಸುತ್ತದೆ. ಕಾಂಗ್ರೆಸ್ - ಜಾತಿ ಪಕ್ಷಗಳ ಅನೀತಿಯುತ ಕೂಟ ತನ್ನ ಬಾಲಿಶ ಪ್ರಜಾಪ್ರಭುತ್ವ ವಿರೋಧಿ ಕೆಲಸಗಳಿಂದ ಕುಖ್ಯಾತವಾಗುತ್ತಿದೆ. ವಿಧಾನ ಸಭೆ ಸ್ಪೀಕರ್‌ನ್ನು ಥಳಿಸುವವರೆಗೆ ವಿರೋಧಿ ರಾಜಕೀಯದ ಮಟ್ಟ ಮುಟ್ಟಿದೆ.

ಮಲತಾಯಿ ಧೋರಣೆ

ಪಶ್ಚಿಮ ಬಂಗಾಳದಲ್ಲಿ ಕೈಗಾರಿಕಾ ಬೆಳವಣಿಗೆಯಲ್ಲಿ ಕೇಂದ್ರ ಸರ್ಕಾರ ಅಸಹಕಾರ ತೋರಿಸಿದ್ದು, ಹಲ್ದಿಯಾ ಪೆಟ್ರೋ ಕೆಮಿಕಲ್ ಕಾರ್ಖಾನೆ ಮತ್ತು ಬಕ್ರೇಶ್ವರ ವಿದ್ಯುತ್‌ಜನಕ ಕೇಂದ್ರಗಳಿಗೆ ವಿನಾಕಾರಣ ವಿಳಂಬ ತರುತ್ತಿದೆ. ಈ ಮಲತಾಯಿ ಧೋರಣೆ ಬಿಟ್ಟು ಎಡರಂಗ ಸರ್ಕಾರದ ಜತೆ ಸಹಕರಿಸಬೇಕೆಂದು ಕೇಂದ್ರ ಒತ್ತಾಯಿಸುತ್ತಿದೆ.

ಪಶ್ಚಿಮ ಬಂಗಾಳ: ಪಂಚಾಯತ್ ಜಯಭೇರಿ

ಎಡರಂಗದೊಳಗೆ ಭಿನ್ನಾಭಿಪ್ರಾಯಗಳಿದ್ದಾಗ್ಯೂ, ಪಂಚಾಯತ್ ಚುನಾವಣೆಗಳಲ್ಲಿ ಪಶ್ಚಿಮ ಬಂಗಾಳದ ಜನತೆ ಒದಗಿಸಿಕೊಟ್ಟಿರುವ ಭಾರೀ ವಿಜಯಕ್ಕಾಗಿ ಪಿ. ಬಿ. ಅಭಿನಂದಿಸುತ್ತದೆ. ಚುನಾವಣೆಯ ಆರಂಭದಲ್ಲಿ ಸ್ಟೆನ್‌ಗನ್‌ಗಳ ಸದ್ದಿನಿಂದ ಆರಂಭಿಸಿ ಮುಗಿಯುವ ಹೊತ್ತಿಗೆ ಯಾರೂ ನಂಬದ ಪೊಳ್ಳು ಚುನಾವಣೆಗಳ ಪುಕಾರು ಹಬ್ಬಿಸುವುದರಿಂದ ಕಾಂಗ್ರೆಸ್ ತನ್ನ ಇದ್ದಬದ್ದ ವರ್ಚಸ್ಸು ಕಳೆದು ಮೂಲೆ ಗುಂಪಾಗಿದೆ.

(6ನೇ ಪುಟ ನೋಡಿ)

ಐಕ್ಯ ಕಾರ್ಮಿಕವರ್ಗ: ಅತ್ಯಂತ ಪರಿಣಾಮಕಾರೀ ಶಕ್ತಿ

(3ನೇ ಪುಟದಿಂದ)

ಹರಿಯಬಿಟ್ಟಿರುವ ವ್ಯಾಪಕ ದಮನ ಕ್ರಮಗಳ ವಿರುದ್ಧ ಪ್ರತಿಭಟಿಸಬೇಕೆಂದು ಎಲ್ಲಾ ವಿಭಾಗದ ಕಾರ್ಮಿಕರಿಗೆ ಕರೆ ನೀಡುತ್ತದೆ. ಸೇನೆ ನಿಲ್ಲಿಸಿ ಅಧಿಕಾರದ ಮೇಲೆ ಹತೋಟಿ ಪಡೆದಿರುವ ಕಾಂಗ್ರೆಸ್ (ಐ) ತ್ರಿಪುರಾದಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ತುಳಿದು ಹಾಕುತ್ತಿರುವುದು, 59ನೇ ತಿದ್ದುಪಡಿ, ಮಾರ್ಚ್ 15ರ ದಮನ, ಎಡರಂಗ ಸರ್ಕಾರದ ವಿರುದ್ಧ ಕಾಂಗ್ರೆಸ್ (ಐ) ಜನಗಳು ಬಾಂಬ್ ಬಳಸುತ್ತಿರುವುದು, ಚುನಾವಣೆಗಳಲ್ಲಿ ಶಸ್ತ್ರ ಬಳಸಲು ಬಹಿರಂಗ ಕರೆ, ವಿರೋಧಪಕ್ಷಗಳ ಬಗ್ಗೆ ಅಸಹನೆ ಇವೆಲ್ಲಾ ರಾಜೀವ್ ಸರ್ಕಾರದ ಹೆಚ್ಚುತ್ತಿರುವ ಸರ್ವಾಧಿಕಾರೀ ಏಕಪಕ್ಷ ಆಳ್ವಿಕೆಯ ಪ್ರವೃತ್ತಿಯ ಸೂಚಕಗಳು. ಕಾರ್ಮಿಕರ ಮುಷ್ಕರಗಳನ್ನು ಬಹಿರಂಗವಾಗಿ ಮುರಿಯುವಲ್ಲಿಯೂ ಈ ಪ್ರವೃತ್ತಿ ಕಂಡುಬರುತ್ತಿದೆ. ಇಂತಹ ಹಲ್ಲೆಗಳ ವಿರುದ್ಧ ಪ್ರತಿರೋಧ ಸಂಘಟಿಸಲು, ರಾಜೀವ್‌ಗಾಂಧಿ ರಾಜೀನಾಮೆಯ ಒತ್ತಾಯವನ್ನು ಸತತವಾಗಿ ಎತ್ತಿ, ವ್ಯಾಪಕಗೊಳಿಸಬೇಕೆಂದು ಸಿಐಟಿಯು ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ.

ಉದ್ಯೋಗದ ಮೂಲಭೂತ ಹಕ್ಕು

ಕಳೆದ ಮೇದಿನದ ನಂತರದ ಒಂದು ವರ್ಷ ಭಾರತದ ಕಾರ್ಮಿಕರು ಮತ್ತು ನೌಕರರಿಗೆ ವಿಪರೀತ ಬವಣೆಗಳಿಂದ, ಪರೀಕ್ಷೆಗಳಿಂದ ಕೂಡಿದ ಕಾಲ. ಅದು ಹೆಚ್ಚುತ್ತಿರುವ ಹೋರಾಟಗಳ, ಹೆಚ್ಚುತ್ತಿರುವ ಐಕ್ಯತೆಯ ಕಾಲಾವಧಿ ಕೂಡಾ. ಹೋರಾಟನಿರತ ಕಾರ್ಮಿಕರಿಗೆ ಹಾಗೂ ಅವರ ಸಂಕಷ್ಟ ಪೀಡಿತ ಕುಟುಂಬಗಳಿಗೆ ಸಿಐಟಿಯು ತನ್ನ ಆಳವಾದ ಸಹಾನುಭೂತಿ ವ್ಯಕ್ತಪಡಿಸುತ್ತದೆ. ಪೊಲೀಸ್‌ರ ಗುಂಡುಗಳಿಗೆ, ಕೊಲೆಗಡುಕರ ಕತ್ತಿಗಳಿಗೆ ಬಲಿಯಾದ ಕಾರ್ಮಿಕರಿಗೆ, ಪಂಜಾಬ್, ಅಸ್ಸಾಂ, ಡಾರ್ಜಿಲಿಂಗ್‌ಗಳಲ್ಲಿ ಪ್ರತ್ಯೇಕತಾವಾದಿ ಭಯೋತ್ಪಾದಕರ ವಿರುದ್ಧ ಹೋರಾಟದಲ್ಲಿ ಮಡಿದ ಸಂಗಾತಿಗಳಿಗೆ ಸಿಐಟಿಯು ತನ್ನ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಕಳೆದ ಮೇ ದಿನದ ನಂತರ ಭಾರತದಲ್ಲಿ ಆರ್ಥಿಕ ಪರಿಸ್ಥಿತಿ ಇನ್ನಷ್ಟು ಹದಗೆಟ್ಟು, ಬಿಕ್ಕಟ್ಟು ಮತ್ತಷ್ಟು ಆಳವಾಗಿದೆ. ಆಧುನೀಕರಣ ಮತ್ತಷ್ಟು ತೀವ್ರಗೊಂಡಿರುವ ಕಂಪ್ಯೂಟರೀಕರಣ, ಹೊಸ ವೇತನ ಒಪ್ಪಂದಗಳಿಗೆ ನಿರಾಕರಣೆ, ಮನಬಂದಂತೆ ವಜಾ, ರಿಟ್ರೆಂಚ್‌ಮೆಂಟ್ ಇತ್ಯಾದಿ ಬಂಡವಾಳ ಶಾಹಿಗಳಿಂದ ಮತ್ತು ಸರ್ಕಾರದಿಂದ ಹಲವಾರು ಹಲ್ಲೆಗಳನ್ನು ಕಾರ್ಮಿಕ ವರ್ಗ ಎದುರಿಸಬೇಕಾಗಿ ಬಂದಿದೆ. ದೆಹಲಿ ಬಸ್ ಕಾರ್ಮಿಕರ ಮುಷ್ಕರ ಮುರಿಯಲು ಬಳಸಿದ ಬರ್ಬರ ವಿಧಾನಗಳು ಒಂದು ಉದಾಹರಣೆಯಷ್ಟೇ.

ರೋಗಗ್ರಸ್ತ ಕೈಗಾರಿಕೆಗಳ ಸಂಖ್ಯೆ ಏರುತ್ತಲೇ ಇದೆ. ಆದರೆ ರಾಜೀವ ಸರ್ಕಾರಕ್ಕೆ ಉದ್ಯೋಗ ಒದಗಿಸುವ, ತಪ್ಪಿದರೆ ನಿರುದ್ಯೋಗ ಪರಿಹಾರ ನೀಡುವ ಯೋಚನೆಯೇ ಇದ್ದಂತಿಲ್ಲ. ಬದಲಿಗೆ ಖಾಸಗಿ ಬಂಡವಾಳ ಶಾಹಿಗಳಿಗೆ ಮತ್ತು ಸಾರ್ವಜನಿಕ ವಲಯಕ್ಕೆ ಕಂಪ್ಯೂಟರೀಕರಿಸಲು ಇನ್ನಷ್ಟು ಪ್ರೋತ್ಸಾಹ ನೀಡಲಾಗುತ್ತಿದೆ. ಆದ್ದರಿಂದಲೇ ಸಿಐಟಿಯು ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿ ಸಂವಿಧಾನದಲ್ಲಿ ಸೇರಿಸಬೇಕೆಂಬ ಒತ್ತಾಯವನ್ನು ಮುಂದಿಡುತ್ತಿದೆ. ಅದುವರೆಗೆ ಎಲ್ಲಾ ಕೈಗಾರಿಕಾ ಹಾಗೂ ಗ್ರಾಮೀಣ ನಿರುದ್ಯೋಗಿಗಳಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸುತ್ತದೆ.

ಹೊಸ ಬಜೆಟ್ ಸೂಚನೆಗಳು ಹಾಗೂ ವಿಪರೀತ ಕೊರತೆ, ಹಣದುಬ್ಬರವನ್ನು ವಿಪರೀತವಾಗಿ ಹೆಚ್ಚಿಸಲಿದೆ. ಇದು ಕಾರ್ಮಿಕರ ದೀರ್ಘ ಹೋರಾಟಗಳ ಸಾಧನೆಗಳನ್ನೆಲ್ಲಾ ಅಳಿಸಿ ಬಿಡಬಹುದು. ಆದ್ದರಿಂದ ನಿರುದ್ಯೋಗ, ಕಂಪ್ಯೂಟರೀಕರಣದ ವಿರುದ್ಧ ಲಾಕೌಟ್, ಕ್ಲೋಶರ್‌ಗಳನ್ನು ತೆಗೆಸಲು ಸೂಕ್ತ ವೇತನ ಒಪ್ಪಂದಗಳು, ರೈತರಿಗೆ ಲಾಭಕರ ಬೆಲೆ ಮತ್ತು ಕೃಷಿ ಕಾರ್ಮಿಕರಿಗೆ ಯೋಗ್ಯ ಕೂಲಿಗಾಗಿ ಹಾಗೂ ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿಸಲು ನಿರುದ್ಯೋಗ ಪರಿಹಾರ ನೀಡಲು ಸಮಸ್ತ ಕಾರ್ಮಿಕ ಆಂದೋಲನ ಒಂದು ಐಕ್ಯ ಹೋರಾಟ ನಡೆಸಬೇಕೆಂದು ಸಿಐಟಿಯು ಕರೆ ನೀಡುತ್ತದೆ. ಕಾರ್ಖಾನೆಗಳಲ್ಲಿ ಸುರಕ್ಷತಾ ಶಾಸನ ಮಹಿಳೆಯರಿಗೆ ಹೆರಿಗೆ ಸೌಲಭ್ಯ ಮತ್ತು ಸಮಾನ ವೇತನ ಶಾಸನಗಳೂ ಸೇರಿದಂತೆ ಎಲ್ಲಾ ಕಾರ್ಮಿಕ ಶಾಸನಗಳು ಕುಸಿದು ಬೀಳುತ್ತಿರುವುದರ ವಿರುದ್ಧವೂ ದನಿಯೆತ್ತಬೇಕೆಂದು ಕರೆ ನೀಡುತ್ತದೆ.

ಹೆಚ್ಚುತ್ತಿರುವ ಆರ್ಥಿಕ ಬಿಕ್ಕಟ್ಟಿನ ನಡುವೆ ವಿಶ್ವಬ್ಯಾಂಕ್ ಹೆಚ್ಚೆಚ್ಚು ಖಾಸಗೀಕರಣ, ವಿದೇಶೀ ಗುತ್ತೆದಾರಿಗಳಿಗೆ ಹೆಚ್ಚೆಚ್ಚು ಮುಕ್ತ ದ್ವಾರದ ಧೋರಣೆ ಅನುಸರಿಸಲು, ಕಾರ್ಮಿಕ ಶಾಸನಗಳಿಂದ ಕಾರ್ಮಿಕರಿಗೆ ಸಿಗುತ್ತಿರುವ ರಕ್ಷಣೆಯನ್ನು ಕಡಿಮೆ ಮಾಡಲು ಒತ್ತಡ ಹೇರುತ್ತಲಿದೆ. ಇವೆಲ್ಲದರಿಂದಾಗಿ ಮುಂಬರುವ ಹಲ್ಲೆಗಳು ಇನ್ನಷ್ಟು ಬಲವಾಗಿರುತ್ತವೆ. ಇದನ್ನು ಎದುರಿಸಬೇಕಾದರೆ ವಿಶ್ವಬ್ಯಾಂಕ್‌ನ ಒತ್ತಡಗಳಿಗೆ ತಲೆಬಾಗುವ ರಾಜೀವ ಸರಕಾರದ ವಿರುದ್ಧ ಹೋರಾಡಬೇಕಾಗುತ್ತದೆ. ಆದ್ದರಿಂದಲೇ ಕಾರ್ಮಿಕ ಸಂಘಗಳು ಮತ್ತು ಎಡ ಮತ್ತು ಇತರ ರಾಜಕೀಯ ಪಕ್ಷಗಳು ರಾಜೀವ ಸರ್ಕಾರದ ರಾಜೀನಾಮೆಯ ಬೇಡಿಕೆಯೆತ್ತಿರುವುದು.

ಅಲ್ಲದೆ ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗದ ಐಕ್ಯತೆ ಕೂಡಾ ಇನ್ನಷ್ಟು ಬಲಗೊಳ್ಳಬೇಕಾಗಿದೆ. ಹೆಚ್ಚೆಚ್ಚು ಕಾರ್ಮಿಕರು ಸಮಾನ ಹೋರಾಟದತ್ತ ಸೆಳೆಯಲ್ಪಡುತ್ತಿದ್ದಾರೆ, ಐಕ್ಯತೆಯ ಭಾವನೆ ತೀವ್ರಗೊಳ್ಳುತ್ತಿದೆ. ಇದಕ್ಕಾಗಿ ಎನ್‌ಸಿಸಿಯನ್ನು ಸಿಐಟಿಯು ಅಭಿನಂದಿಸುತ್ತದೆ, ಆದರೆ ಐಕ್ಯತೆಯ, ಹೋರಾಟದ ವ್ಯಾಪ್ತಿ ಹೆಚ್ಚುತ್ತಿರುವ ಈಗಿನ ಸನ್ನಿವೇಶದಲ್ಲಿ ಎನ್‌ಸಿಸಿ ಗಿಂತಲೂ ವ್ಯಾಪಕವಾದ, ಎಲ್ಲಾ ಐಕ್ಯ ಹೋರಾಟಗಳನ್ನು ಒಳಗೊಂಡು, ಸಮಸ್ತ ಕಾರ್ಮಿಕ ಆಂದೋಲನವನ್ನು ಒಗ್ಗೂಡಿಸುವ ಪಾತ್ರವಹಿಸಲು ಶಕ್ತವಾದ ಒಂದು ಸಂಘಟನಾ ಸ್ವರೂಪ ಅಗತ್ಯ ಎಂದು ಸಿಐಟಿಯು ಭಾವಿಸುತ್ತದೆ. ಎಲ್ಲಾ ಕಾರ್ಮಿಕ ಸಂಘಗಳ ಹಾಗೂ ಒಕ್ಕೂಟಗಳ ಒಂದು ಮಹಾ ಸಂಘ (ಕಾನ್ಫೆಡರೇಶನ್) ಇಂತಹ ಸನ್ನಿವೇಶದಲ್ಲಿ ಹೆಚ್ಚು ಪರಿಣಾಮಕಾರೀ ಸಾಧನ.

ತನ್ನ ಜೀವನ ಪರಿಸ್ಥಿತಿಗಳನ್ನು ರಕ್ಷಿಸಿಕೊಂಡು, ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಹಾಗೂ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಾಪಾಡಿಕೊಳ್ಳುವಲ್ಲಿ ಇತರ ಜನವಾದೀ ಶಕ್ತಿಗಳೊಂದಿಗೆ ಸಹಕರಿಸುವ ಐಕ್ಯ ಕಾರ್ಮಿಕ ವರ್ಗ ಈ ಮಹತ್ವಪೂರ್ಣ ಕಾಲಘಟ್ಟದಲ್ಲಿ ತನ್ನ ಸ್ವಂತ ಹಿತಾಸಕ್ತಿಗಳನ್ನು ಹಾಗೂ ಭಾರತೀಯ ಜನತೆಯ ಹಿತಾಸಕ್ತಿಗಳನ್ನು ಈಡೇರಿಸುವಲ್ಲಿ ಅತ್ಯಂತ ಪರಿಣಾಮಕಾರಿ ಶಕ್ತಿ. ಇಂತಹ ಐಕ್ಯತೆಗಾಗಿ ದುಡಿಯಬೇಕೆಂದು ತನ್ನ ಎಲ್ಲಾ ರಾಜ್ಯ ಸಮಿತಿಗಳಿಗೆ ಮತ್ತು ಎಲ್ಲಾ ಕಾರ್ಮಿಕ ಸಂಘಗಳಿಗೆ ಸಿ.ಐ.ಟಿ.ಯು ಕರೆ ನೀಡುತ್ತದೆ.

(ಸಿ.ಐ.ಟಿ.ಯು. ಪ್ರಣಾಳಿಕೆ)

ಬೀಡಿ ಕಾರ್ಮಿಕರ ಮಹಾ ಸಭೆ

ಮಂಗಳೂರು ಬೀಡಿ ಕೆಲಸಗಾರರ ಸಭೆ ಅಶೋಕನಗರದಲ್ಲಿ ಕಾ॥ ಯು. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತು. ಕಾ॥ ಆನಂದ ದೇವಾಡಿಗ, ಪ್ರಧಾನ ಕಾರ್ಯದರ್ಶಿ ಕಾ॥ ಜಿ. ವೀರಪ್ಪನವರು ಮಾತನಾಡಿದರು, ಸಭೆಯಲ್ಲಿ ಒಂದು ಸಂಘಟನಾ ಸಮಿತಿಯನ್ನು ರಚಿಸಲಾಯಿತು.

ನೂತನ ಸಮಿತಿಗೆ ಕಾ॥ ಸುಂದರ (ಕಾರ್ಯದರ್ಶಿ) ನಾರಾಯಣರಾವ್, ಕೃಷ್ಣ (ಜೊತೆ ಕಾರ್ಯದರ್ಶಿಗಳು)ರ ಮರವನ್ನೊಳಗೊಂಡ 15ಜನರ ಸಮಿತಿ ರಚಿಸಲಾಯಿತು.

ಇರುವೈಲು:

ಕುಪ್ಪೆ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಇರುವೈಲು ಘಟಕದ ಮಹಾಸಭೆಯು ಕಾ॥ ತಿಮ್ಮಪ್ಪ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಫೆಬ್ರವರಿ 14ರಂದು ಜರುಗಿತು. ಕಾ॥ ಯು.ಬಿ. ಲೋಕಯ್ಯನವರು ಮಾತನಾಡಿ ಮಾಲೀಕರ ಹಾಗೂ ಮಧ್ಯವರ್ತಿಗಳಿಂದ ಬೀಡಿ ಕಾರ್ಮಿಕರಿಗಾಗುತ್ತಿರುವ ಶೋಷಣೆಯನ್ನು ವಿರೋಧಿಸಿ ಬೀಡಿ ಉದ್ಯಮದ ರಾಷ್ಟ್ರೀಕರಣಕ್ಕಾಗಿ ತೀವ್ರ ರೀತಿಯ ಹೋರಾಟ ನಡೆಸಬೇಕೆಂದು ಬೀಡಿ ಕಾರ್ಮಿಕರಿಗೆ ಕರೆ ನೀಡಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಸಿಂಧನೂರು ಘಟಕ ಆಶ್ರಯದಲ್ಲಿ ಮಾರ್ಚ್ 9 ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನೂ ಏರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಸಂಘಟನೆಯ ರಾಜ್ಯ ಸಂಚಾಲಕಿ ಕಾ॥ ಹರಿಣಿ ಕಕ್ಕೇರಿಯವರು ವಹಿಸಿದ್ದರು.

ಸಮಾರಂಭದಲ್ಲಿ ಸ್ಥಳೀಯ ಮಹಿಳಾ ಸಂಘಟನೆಗಳಾದ ವಾಸವಿ ಮಹಿಳಾ ಮಂಡಳ ಹಾಗೂ ಅಕ್ಕನ ಬಳಗದ ಸದಸ್ಯರು ಪಾಲ್ಗೊಂಡಿದ್ದರು. ಅಂತರರಾಷ್ಟ್ರೀಯ ಮಹಿಳಾ ದಿನದ ಚಾರಿತ್ರಿಕ ಹಿನ್ನೆಲೆ, ಎಲ್ಲಾ ರೀತಿಯ ಶೋಷಣೆ ಹಾಗೂ ಅಸಮಾನತೆಯ ವಿರುದ್ಧ ಮಹಿಳೆ ಸಂಘಟನೆಯಾಗಿ ದೇಶದಲ್ಲಿ ಬೆಳೆದು ಬರುತ್ತಿರುವ ಎಡ ಹಾಗೂ ಜಾತ್ಯಾತೀತ ಶಕ್ತಿಗಳೊಂದಿಗೆ ಜೊತೆಗೂಡಿ ಕೇಂದ್ರದ ರಾಜೀವ್‌ಗಾಂಧಿ ಸರ್ಕಾರದ ಜನ ವಿರೋಧಿ ನೀತಿಯ ವಿರುದ್ಧ ಹೋರಾಟ ನಡೆಸಬೇಕೆಂದು ಅರಿಣಿ ಕಕ್ಕೇರಿ ಕರೆ ನೀಡಿದರು.

ಭಾರತ್ ಬಂದ್ ಸಂದರ್ಭದಲ್ಲಿ ಪುರುಷೋತ್ತಮ ಕಲಾಲ ಬಂಡಿ ಹಾಗೂ ಕಾ॥ ವೆಂಕಟೇಶ್‌ರವರ ಮೇಲೆ ಕಾಂಗ್ರೆ ಗೂಂಡಾಗಳು ನಡೆಸಿದ ಹಲ್ಲೆಯನ್ನು ಸಂಘಟನೆ ತೀವ್ರವಾಗಿ ಖಂಡಿಸಿದೆ.

ಡಿ.ವೈ.ಎಫ್.ಐ. ಸಪ್ತಾಹಾಚರಣೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಚಿಂತಾಮಣಿ ತಾಲ್ಲೂಕು ಗಡಿವಾರ ಹಳ್ಳಿ ಗ್ರಾಮದಲ್ಲಿ ಮಾರ್ಚ್ 25ರಂದು ನಿರುದ್ಯೋಗ ವಿರೋಧಿ ಸಪ್ತಾಹಾಚರಣೆ ಅಂಗವಾಗಿ 'ಅನಕ್ಷರತಾ ವಿರೋಧಿ' ದಿನಾಚರಣೆಯನ್ನು ಆಚರಿಸಲಾಯಿತು. ಚಿಕ್ಕನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯನ್ನುದ್ದೇಶಿಸಿ ರೈತನಾಯಕ ರಾಮಚಂದ್ರಗೌಡ ಯುವನಾಯಕ ಆಂಜನೇಯರೆಡ್ಡಿ, ಮುನಿವೆಂಕಟರೆಡ್ಡಿಯವರು ಮಾತನಾಡಿ ಅನಕ್ಷರತೆಯನ್ನು ಹೋಗಲಾಡಿಸುವಲ್ಲಿ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಿಸುವಲ್ಲಿ ವಿಫಲಗೊಂಡಿರುವ ಕೇಂದ್ರ–ರಾಜ್ಯ ಸರ್ಕಾರಗಳ ಶಿಕ್ಷಣ ನೀತಿಯನ್ನು ಅವರುಗಳು ಖಂಡಿಸಿದರು.

ಭಗತ್‌ಸಿಂಗ್ ದಿನಾಚರಣೆ

(ಐದನೇ ಪುಟದಿಂದ)

ಪ್ರದೇಶದ ಯುವಜನತೆಗೆ ಕ್ರೀಡೆಯ ಬಗ್ಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿರುವ ಡಿವೈಎಫ್‌ಐ ಸಂಘಟನೆಯನ್ನು ಅಭಿನಂದಿಸಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಬಿ.ಸಿ. ರಾಜುರವರು ಸ್ಥಳೀಯವಾಗಿ ಕೋಮು ಭಾವನೆಯನ್ನು ಬಿತ್ತುವ ಸಂಘಟನೆಗಳ ವಿರುದ್ಧ ಯುವ ಜನತೆ ಎಚ್ಚರದಿಂದಿದ್ದು ನಾಗರೀಕರ ಕುಂದು ಕೊರತೆ ನಿವಾರಣೆಗಾಗಿ ಐಕ್ಯ ಹೋರಾಟ ನಡೆಸಲು ಮುಂದೆ ಬರಬೇಕೆಂದು ಕರೆ ನೀಡಿದರು. ಎಸ್‌ಎಫ್‌ಐನ ಕಾಂ॥ ಬಿ. ಎಸ್. ಪಾರಿಜಾತರವರು ಮಾತನಾಡಿದರು. ಸಂತ ಅನ್ನಮ್ಮ ಶಾಲೆಯ ಕ್ರೀಡಾಅಧ್ಯಾಪಕರಾದ ಜಯರಾಮ್‌ರವರು ಬಹುಮಾನ ವಿತರಣೆ ಮಾಡಿದರು. ಡಿವೈಎಫ್‌ಐ ರಾಜ್ಯ ಸಹಕಾರ್ಯದರ್ಶಿ ಕಾ॥ ಸ್ಟ್ಯಾನ್ ಲೀವಾಜ್, ಪಾರ್ವತಿಯವರು ಸಭೆಯಲ್ಲಿ ಮಾತನಾಡಿದರು. ಪದ್ಮನಾಭ ಸ್ವಾಗತಿಸಿ ಮುರಳಿಯವರ ವಂದನಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯಗೊಂಡಿತು.

ಕೇರಳದಲ್ಲಿ ಬಂದ್

ಕೇರಳದಲ್ಲಿ ಆ ದಿನ ಸಂಚಾಲನೆ ಇರಲಿಲ್ಲ. ಪಾನ್ ಬೀಡ ಅಂಗಡಿಯಿಂದ ಹಿಡಿದು ಬೃಹತ್ ಕೈಗಾರಿಕೆಗಳೆಲ್ಲವೂ ಬಂದ್ ಆಚರಿಸಿತು. 30ಕ್ಕೂ ಕಡಿಮೆ ಹಾಜರಾತಿ ಕಛೇರಿಗಳಲ್ಲಿ ನಡೆದ 'ಬಂದ್'ನ ಯಶಸ್ವಿ ಸೂಚನೆಯಾಗಿತ್ತು. ಕೇರಳದ ಕೈಗಾರಿಕಾ ಪ್ರದೇಶಗಳಾದ ಅಲ್ವೇ, ಎಲೂರೂ, ಕಲಾಮಸ್ಸೇರಿ ನಿದ್ರೆಮಾಡಿತು, ಕ್ವಿಲಾನ್‌ನ ಪಾರ್ವತಿ ಮಿಲ್‌ನಲ್ಲಿ 1200 ಕೆಲಸಗಾರರ ಪೈಕಿ ಕೇವಲ 8 ಜನ ಮಾತ್ರ ಹಾಜರಿದ್ದರು. 50ಸಾವಿರ ನಾರಿನ ಕೆಲಸಗಾರರು ಕೆಲಸ ಮಾಡಲಿಲ್ಲ. ಕಾಂಗ್ರೆ ಹಾಗೂ ಅವರ ಹಿಂಬಾಲಕರು ಮೆರವಣಿಗೆ ತೆಗೆದು ಅಶಾಂತಿ ಹಂಚಲು ಪ್ರಾರಂಭಿಸಿದರು. 'ದೇಶಾಭಿಮಾನಿ' ಪತ್ರಿಕೆ ಕಛೇರಿಯ ಮೇಲೆ ಗೂಂಡಾಗಳು ಕಲ್ಲುಗಳ ಮಳೆಗರೆದರು. ಕಾಂಗ್ರೆನವರ ಅಂಗಡಿ ಮುಂಗಟ್ಟುಗಳನ್ನು ಮುಚ್ಚು ಎಂತೆ ಒತ್ತಾಯಿಸುತ್ತಿದ್ದ ಸಂಗಾತಿಗಳ ಮೇಲೆ ಗುಂಡಿನ ಮಳೆಗರೆಯಲಾಯಿತು. ಮಹಿಳೆಯರನ್ನೂ ಒಳಗೊಂಡು ಹಲವರು ಗಾಯಗೊಂಡರು. ಇಬ್ಬರು ಸ್ಥಳದಲ್ಲಿಯೇ ಮರಣ ಹೊಂದಿದರು.

ಸ್ವಾರ್ಥ ಬಿಡಿ ಹೋರಾಟದ ಕಣಕ್ಕೆ ಧಾವಿಸಿ

ಕಾರ್ಮಿಕರಿಗೆ ಮೇ ದಿನದ ಕರೆ

ಮೇ ದಿನದಂದು ಎಲ್ಲಾ ಸಮಾಜವಾದಿ ದೇಶಗಳ ಕಾರ್ಮಿಕ ವರ್ಗಕ್ಕೆ ಹಾಗು ಜನತೆಗೆ ಸಿ.ಐ.ಟಿ.ಯು. ತನ್ನ ಶುಭಾಶಯಗಳನ್ನು ಕೋರುತ್ತಾ ಅವರ ಆರ್ಥಿಕವ್ಯವಸ್ಥೆಯ ಅಭಿವೃದ್ಧಿಯಲ್ಲಿ, ಜೀವನ ಮಟ್ಟವನ್ನು ಮತ್ತಷ್ಟು ಶ್ರೀಮಂತಗೊಳಿಸುವಲ್ಲಿ ಇನ್ನಷ್ಟು ಯಶಸ್ಸು ದೊರೆಯಲೆಂದು ಆಶಿಸುತ್ತದೆ.

ಜಗತ್ತಿನ ಮೇಲೆ ವ್ಯಾಪಿಸಿರುವ ಪರಮಾಣು ಅಪಾಯವನ್ನು ತಪ್ಪಿಸುವಲ್ಲಿ ಸೋವಿಯತ್ ಒಕ್ಕೂಟದ ಸತತ ಪ್ರಯತ್ನಗಳಿಂದಾಗಿ ಸಮೀಪ ಹಾಗೂ ಮಧ್ಯಮ ಪ್ರಮಾಣದ ಕ್ಷಿಪಣಿಗಳನ್ನು ನಿರ್ಮೂಲಗೊಳಿಸುವ ಒಪ್ಪಂದವಾಗಿರುವುದಕ್ಕೆ ತನ್ನ ಹಾರ್ಧಿಕ ಸಂತೋಷವನ್ನು ವ್ಯಕ್ತಪಡಿಸುತ್ತದೆ. ಅಮೇರಿಕಾ ತನ್ನ ತಾರಾಯುದ್ಧ ಯೋಜನೆಯನ್ನು ಕೈಬಿಡುವಂತೆ ವಿಶ್ವದ ಶಾಂತಿಪ್ರಿಯ ಶಕ್ತಿಗಳು ಒತ್ತಡ ತರದಿದ್ದರೆ ಶಾಶ್ವತ ಪರಮಾಣು ಶಾಂತಿ ಸಾಧ್ಯವಿಲ್ಲವೆಂದೂ-ಸಿ.ಐ.ಟಿ.ಯು ಭಾವಿಸುತ್ತದೆ.

ಶಾಂತಿಗಾಗಿ ಸಮರ ನಡೆಸುತ್ತಿರುವ ಸಮಾಜವಾದಿ ದೇಶಗಳ ಕಾರ್ಮಿಕ ವರ್ಗ, ಜನತೆ ಹಾಗೂ ಸರಕಾರಗಳಿಗೆ ಸಿ.ಐ.ಟಿ.ಯು. ವಿನ ಅಭಿನಂದನೆಗಳು.

ವಿಶ್ವ ಶಾಂತಿ ಆಂದೋಲನ ಹಾಗೂ ಜಗತ್ತನ್ನು ಪರಮಾಣು ವಿನಾಶದಿಂದ ಉಳಿಸಬಯಸುವ ಕೋಟ್ಯಾಂತರ ಜನರಿಗೆ ಸಿ.ಐ.ಟಿ.ಯು. ವಿನ ಅಭಿನಂದನೆಗಳು. ಈ ಹೋರಾಟದಲ್ಲಿ ಭಾರತದ ಕಾರ್ಮಿಕ ವರ್ಗ ತನ್ನ ಪಾತ್ರವಹಿಸುವಂತೆ ಜಾಗೃತಗೊಳಿಸುವ ತನ್ನ ಕರ್ತವ್ಯವನ್ನು ಪಾಲಿಸುತ್ತದೆ ಎಂದು ಸಿ.ಐ.ಟಿ.ಯು. ಆಶ್ವಾಸನೆ ನೀಡುತ್ತದೆ.

ಬಂಡವಾಳಶಾಹೀ ದೇಶಗಳ ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹೀ ಯಜಮಾನರುಗಳು ತಮ್ಮ ದೇಶಗಳ ಸಂಪತ್ತನ್ನು ಕಾರ್ಮಿಕರ ಉದ್ಯೋಗ ಭದ್ರತೆಗೆ ಹಾಗೂ ಜೀವನ ಮಟ್ಟ ಸುಧಾರಣೆಗೆ ಬಳಸುವ ಬದಲು ವಿನಾಶಕಾರೀ ಅಸ್ತ್ರಗಳಿಗಾಗಿ ಬಳಸುತ್ತಿರುವುದರಿಂದ ನಿರುದ್ಯೋಗ, ಮುಂತಾದ ಅಸಹನೀಯ ಸಂಕಷ್ಟಗಳನ್ನು ಎದುರಿಸುತ್ತಿರುವ ಈ ದೇಶಗಳ ಕಾರ್ಮಿಕ ವರ್ಗಕ್ಕೆ ಸಿ.ಐ.ಟಿ.ಯು. ವಿನ ಮೇ ದಿನದ ಶುಭಾಶಯಗಳು.

ಮೂರನೇ ಜಗತ್ತಿನ ಜನ ಸಮುದಾಯಕ್ಕೆ

ಸಾಮ್ರಾಜ್ಯಶಾಹೀ ಕುತಂತ್ರಗಳ ವಿರುದ್ಧ, ಕೆಲವೆಡೆ ಸಾಮ್ರಾಜ್ಯಶಾಹೀಗಳ ಜತೆ ಶಾಮೀಲಾಗಿರುವ ತಮ್ಮ ದೇಶಗಳ ಪ್ರತಿಗಾಮಿ ಸರ್ಕಾರಗಳ ವಿರುದ್ಧ, ಸ್ವಾತಂತ್ರ್ಯದ ರಕ್ಷಣೆಗಾಗಿ ಹೋರಾಡುತ್ತಿರುವ ತೃತೀಯ ಜಗತ್ತಿನ ದೇಶಗಳ ಜನತೆಗೆ ಸಿ.ಐ.ಟಿ.ಯು ಹಾರ್ಧಿಕ ಶುಭಕೋರುತ್ತದೆ, ವಿಶೇಷವಾಗಿ ಸಾಮ್ರಾಜ್ಯಶಾಹೀಗಳು ಮತ್ತು ಅವರ ಏಜೆಂಟರ ವಿರುದ್ಧ ಧೀರ ಹೋರಾಟ ನಡೆಸುತ್ತಿರುವ ನಿಕರಾಗುವಾ, ಅಂಗೋಲಾ, ಮೊಜಾಂಬಿಕ್‌ನ ಜನತೆಗೆ, ದಕ್ಷಿಣಆಫ್ರಿಕಾದ ಜನತೆ ಹಾಗೂ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಪ್ಯಾಲೆಸ್ಟೈನ್ ಜನತೆಗೆ ಸಿ.ಐ.ಟಿ.ಯು. ವಿನ ಕ್ರಾಂತಿಕಾರೀ ಶುಭಾಶಯಗಳು.

ಮಿಲಿಟರಿ ಆಳ್ವಿಕೆಯ ವಿರುದ್ಧ ಹಾಗೂ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ದೀರ್ಘಹೋರಾಟದಲ್ಲಿ ನಿರತರಾಗಿರುವ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಜನತೆಗೆ ಹಾರ್ಧಿಕ ಶುಭಾಶಯಗಳನ್ನು ಕೋರುತ್ತಾ ತಮ್ಮ ಹೋರಾಟಗಳಲ್ಲಿ ಅವರಿಗೆ ಯಶಸ್ಸು ದೊರೆಯಲೆಂದು ಸಿ.ಐ.ಟಿ.ಯು. ಹಾರೈಸುತ್ತದೆ.

ಒಡಕು ಹುಟ್ಟಿಸಿ ಕಾಲೂರಲು ಸಾಮ್ರಾಜ್ಯಶಾಹಿಗಳು ಪ್ರಯತ್ನಿಸುತ್ತಿರುವ ಶ್ರೀಲಂಕಾದಲ್ಲಿ ತಮಿಳು ಸಮಸ್ಯೆಕುರಿತಂತೆ ಸರಿಯಾದ ಹಾಗೂ ಧೀರ ನಿಯಮ ತಳೆದು ಭಾರತ-ಶ್ರೀಲಂಕಾ ಒಪ್ಪಂದವನ್ನು ಬೆಂಬಲಿಸುತ್ತಿರುವ ಅಲ್ಲಿನ ಎಡ ಪಕ್ಷಗಳನ್ನು ಅಭಿನಂದಿಸುತ್ತಾ ಸಿ.ಐ.ಟಿ.ಯು. ಶ್ರೀಲಂಕಾದ ಕಾರ್ಮಿಕ ವರ್ಗ ಹಾಗೂ ಜನತೆಗೆ ಹಾರ್ಧಿಕ ಶುಭಾಶಯ ಕೋರುತ್ತದೆ. ಸಾಮ್ರಾಜ್ಯಶಾಹಿಗಳ ಕುತಂತ್ರಗಳನ್ನು ಮರೆತು ಸದ್ಯದ ಪರಿಸ್ಥಿತಿಯ ದುರ್ಲಭ ಪಡೆದು ಸಂಕುಚಿತತೆಯನ್ನು ಎಬ್ಬಿಸುತ್ತಿರುವ ಬೇಜವಾಬ್ದಾರಿ ವ್ಯಕ್ತಿಗಳನ್ನು ಹಾಗೂ ಪಕ್ಷಗಳನ್ನು ಸಿ.ಐ.ಟಿ.ಯು. ಖಂಡಿಸುತ್ತದೆ.

ಹೋರಾಟದ ಕಣದಲ್ಲಿ ಜನ ಸಮುದಾಯ

ಭಾರತದ ಎಲ್ಲಾ ಜನವಿಭಾಗಗಳೂ ತಮ್ಮ ಹಕ್ಕುಗಳ ರಕ್ಷಣೆಗಾಗಿ, ರಾಜೀವ್ ಸರ್ಕಾರದ ಧೋರಣೆಗಳ ವಿರುದ್ಧ ಹೆಚ್ಚೆಚ್ಚು ಕಾರ್ಯಶೀಲರಾಗುತ್ತಿವೆ. ಸಕಲ ಜನವಿಭಾಗಗಳೂ ಮಾರ್ಚ್ 15ರ ಬಂದ್‌ನಲ್ಲಿ ವ್ಯಾಪಕವಾಗಿ ಭಾಗವಹಿಸಿರುವುದು ಇದಕ್ಕೊಂದು ಸಾಕ್ಷಿ. ರಾಜೀವ್‌ಗಾಂಧಿ ಸರ್ಕಾರ ರಾಜೀನಾಮೆ ನೀಡಿ, ಹೊಸ ಚುನಾವಣೆ ನಡೆಸುವಂತೆ ಮಾಡಲು ಈ ಸಾಮೂಹಿಕ ಆಂದೋಲನವನ್ನು ಇನ್ನಷ್ಟು ಕ್ರೋಢೀಕರಿಸಬೇಕು.

ಭಾರತ ಬಂದ್‌ನ ಯಶಸ್ಸು ಕಾರ್ಮಿಕ ಸಂಘಟನೆಯ ಚಳುವಳಿ ಹಾಗೂ ಎಡ ಮತ್ತು ಜಾತ್ಯಾತೀತ ಪಕ್ಷಗಳ ನಡುವಿನ ಸಹಕಾರದ ಫಲ. ಹಿಂದೆಂದೂ ಇಂತಹ ವ್ಯಾಪಕ ಸಾಮೂಹಿಕ ಪ್ರತಿಭಟನೆ ಕಂಡು ಬಂದಿರಲಿಲ್ಲ. ಕಾಂಗ್ರೆಸ್ (ಐ)ನ ಬೆಂಬಲಿಗರು ಮತ್ತು ಕೇವಲ ಕೆಲವು ಸುಧಾರಣೆಗಳಿಗಷ್ಟೇ ತಮ್ಮನ್ನು ಸೀಮಿತಗೊಳಿಸುವ ಕಾರ್ಮಿಕ ಮುಖಂಡರು ಒಡ್ಡುವ ಅಡ್ಡಿ-ಆತಂಕಗಳು, ಹಿಂಜರಿಕೆಗಳನ್ನು ಮೀರಿ ನಿಂತು ಈ ಸಹಕಾರವನ್ನು ಮತ್ತಷ್ಟು ಹೆಚ್ಚಿಸಬೇಕು. ಸಮಸ್ತ ದೇಶವನ್ನು ಎದುರಿಸುವ ಪ್ರಶ್ನೆಗಳನ್ನು ನಿರ್ಲಕ್ಷಿಸಿ, ಈ ಪ್ರಶ್ನೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿರುವವರ ಜತೆಗೂಡಲು ನಿರಾಕರಿಸಿದರೆ ಕಾರ್ಮಿಕ ವರ್ಗದ ಆಂದೋಲನ ಒಂದುನಿಕೃಷ್ಟ ಸ್ವಾರ್ಥಪರ ಆಂದೋಲನದ ಮಟ್ಟಕ್ಕಿಳಿಯುತ್ತದೆ.

ಭಾರತ ಬಂದ್

ಮಾರ್ಚ್ 15ರಂದು ಬೃಹತ್ ಪ್ರಮಾಣದಲ್ಲಿ ಭಾಗವಹಿಸಿದ ಕಾರ್ಮಿಕ ಸಂಘಟನೆಯ ಐಕ್ಯತೆಯನ್ನು ಪ್ರದರ್ಶಿಸಿರುವ ಕಾರ್ಮಿಕರು ಹಾಗೂ ನೌಕರರಿಗೆ ಸಿ.ಐ.ಟಿ.ಯು. ವಿನ ಅಭಿನಂದನೆಗಳು. ಇಂಡಿಯನ್ ಏರ್ ಲೈನ್ಸ್ ಸೇರಿದಂತೆ ಎಲ್ಲಾ ಸಾರ್ವಜನಿಕ ವಲಯದ ಕಾರ್ಮಿಕರ ಬೃಹತ್ ಪಾತ್ರ ಈ ಬಂದ್‌ನ ಒಂದು ಮುಖ್ಯ ಅಂಶ. ಹೊಸ-ಹೊಸ ತುಕಡಿಗಳು ಹೋರಾಟದ ಪ್ರವಾಹವನ್ನು ಸೇರಿಕೊಂಡು ಕಾರ್ಮಿಕ ಸಂಘಟನೆಯ ಐಕ್ಯತೆಯನ್ನು ಹೆಚ್ಚಿಸುತ್ತಿವೆ.

ಮಾರ್ಚ್ 15 ರಂದು ಪ್ರತಿಭಟನೆ ಪ್ರತಿನಿತ್ಯ ದೇಶದ ಐಕ್ಯತೆ ಮತ್ತು ಸ್ವಾತಂತ್ರ್ಯವನ್ನು ಅಪಾಯಕ್ಕೀಡು ಮಾಡುತ್ತಿರುವ ಕಾಂಗ್ರೆಸ್ (ಐ)ನ ದೇಶ ವಿರೋಧಿ ಹಾಗೂ ಛಿದ್ರಕಾರೀ ಧೋರಣೆಗಳ ವಿರುದ್ಧ ನಡೆದಿರುವ ಒಂದು ಬೃಹತ್ ಪ್ರತಿಭಟನೆ ಕೂಡಾ. ಕಳೆದ ಮೂರು ವರ್ಷಗಳಲ್ಲಿ ಪ್ರತ್ಯೇಕತಾವಾದಿಗಳು, ಕೋಮುವಾದಿಗಳು ಹಾಗೂ ವಿಚ್ಛಿದ್ರಕಾರಿಗಳ ಹಲ್ಲೆಗಳು ಹೆಚ್ಚುತ್ತಲೆ ಇವೆ. ಆದರೆ ರಾಜೀವ್ ಸರ್ಕಾರ ಅವುಗಳನ್ನು ಜನರಿಂದ ದೂರ ಮಾಡಿ ದೇಶಪ್ರೇಮಿ ಹಾಗೂ ರಾಷ್ಟ್ರೀಯವಾದಿ ಶಕ್ತಿಗಳ ನೆರವಿನಿಂದ ಸೋಲಿಸುವ ಬದಲು ಅವುಗಳೆದುರು ತಲೆಬಾಗುತ್ತಿದೆ. ಪಂಜಾಬಿನಲ್ಲಿಕಾರ್ಮಿಕವರ್ಗ ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ., ಹಾಗೂ ಎಡಪಕ್ಷಗಳು ಅಸ್ಸಾಂ ಮತ್ತು ಡಾರ್ಜಿಲಿಂಗ್‌ನಲ್ಲಿ ಸಿ.ಐ.ಟಿ.ಯು., ಎಸ್.ಎಫ್.ಐ., ಡಿ.ವೈ.ಎಫ್.ಐ, ಗಳ ಕಾರ್ಯಕರ್ತರು ಧೈರ್ಯದಿಂದ ಈ ಛಿದ್ರಕಾರಿಗಳ ಸವಾಲನ್ನು ಎದುರಿಸುತ್ತಿದ್ದಾರೆ. ತಮಿಳುನಾಡಿನಲ್ಲಿ ಸಿ.ಐ.ಟಿ.ಯು, ರಾಜ್ಯ ಸಮಿತಿ ಭಾಷಾಂಧತೆ ಹಬ್ಬಿಸುತ್ತಿರುವವರ ವಿರುದ್ಧ ಹೋರಾಡುತ್ತಿದೆ. ಆದರೆ ಕಾಂಗ್ರೆಸ್ (ಐ) ಎಲ್ಲೂ ಈ ಅಪಾಯಕಾರೀ ಶಕ್ತಿಗಳ ವಿರುದ್ಧ ಕಾರ್ಯಪ್ರವೃತ್ತವಾಗಿರುವುದು ಕಂಡುಬರುತ್ತಿಲ್ಲ.

ಕಾಂಗ್ರೆ ಆಳ್ವಿಕೆಯಲ್ಲಿವ್ಯಾಪಕ ದಮನ ಹಾಗೂ ಪಕ್ಷಪಾತ ಎದುರಿಸಬೇಕಾಗಿರುವ ಮುಸ್ಲಿಂ ಅಲ್ಪ ಸಂಖ್ಯಾತ ಜನ ಸಮೂಹಗಳಿಗೆ ತನ್ನ ಸಹಭೂತಿಯನ್ನು ಸಿ.ಐ.ಟಿ.ಯು. ವ್ಯಕ್ತಪಡಿಸುತ್ತದೆ.

ಮಾಲಿಯಾನಾದಲ್ಲಿ ಅಮಾಯಕ ಮುಸ್ಲಿಮರ ಭೀಕರ ಸಾಮೂಹಿಕ ಕೊಲೆ ಬೂರ್ಜ್ವಾ-ಭೂಮಾಲಿಕ ಆಡಳಿತ ಯಾವ ಪ್ರಪಾತಕ್ಕೆ ಬಿದ್ದಿದೆ ಎಂಬುದಕ್ಕೆ ಉದಾಹರಣೆ. ಸಿ.ಐ.ಟಿ.ಯು. ಈ ದಮನಕಾರಿ ಹಾಗೂ ಪಕ್ಷಪಾತ ಪೂರ್ಣ ಧೋರಣೆಯನ್ನು ಖಂಡಿಸುತ್ತಾ ಬೂರ್ಜ್ವಾ-ಭೂಮಾಲೀಕ ಕಾಂಗ್ರೆಸ್ (ಐ) ಆಳ್ವಿಕೆಯ ವಿರುದ್ಧ ಎಲ್ಲರ ಹೋರಾಟದಲ್ಲಿ ಸೇರಿಕೊಳ್ಳಬೇಕೆಂದು ಅಲ್ಪಸಂಖ್ಯಾತ ಜನ ಸಮೂಹಗಳಿಗೆ ಕರೆ ನೀಡುತ್ತದೆ.

ದೇಶದ ಐಕ್ಯತೆಯ ಹೋರಾಟದಲ್ಲಿ

ಹರಿಜನರ ಮೇಲೂ ಅತ್ಯಾಚಾರಗಳು ಎಡೆಬಿಡದೆ ಮುಂದುವರಿಯುತ್ತಿರುವುದನ್ನು, ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿರುವುದನ್ನು ಕೂಡಾ ಸಿ.ಐ.ಟಿ.ಯು ತೀವ್ರವಾಗಿ ಖಂಡಿಸುತ್ತದೆ. ಅತ್ತ ಧರ್ಮಾಂಧ ಶಂಕರಾಚಾರ್ಯರಿಗೆ ಸತಿಯ ಹೆಸರಿನಲ್ಲಿ ಮಹಿಳೆಯರನ್ನು ಸುಡುವುದನ್ನು ಭವ್ಯೀಕರಿಸುವುದಕ್ಕೆ ಸ್ವಾತಂತ್ರ್ಯ ನೀಡಿರುವುದನ್ನು ಸಿ.ಐ.ಟಿ.ಯು. ತೀವ್ರವಾಗಿ ಖಂಡಿಸುತ್ತದೆ. ಈ ರೀತಿ ಧರ್ಮಾಂಧ ಶಕ್ತಿಗಳೆದುರು ತಲೆಬಾಗುವ ಕಾಂಗ್ರೆಸ್(ಐ) ಧೋರಣೆಗಳ ವಿರುದ್ಧ ಹೋರಾಡಲು ಸಿ.ಐ.ಟಿ.ಯು. ಸಮಸ್ತ ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ.

ಕಾಂಗ್ರೆಸ್ (ಐ)ನ ಈ ಧೋರಣೆಗಳನ್ನು ಸೋಲಿಸದೆ, ವಿಚ್ಛಿದ್ರಕಾರಿಗಳನ್ನು ಜನತೆಯಿಂದ ದೂರೀಕರಿಸದೆ ದೇಶದ ಐಕ್ಯತೆಯ ರಕ್ಷಣೆ ಸಾಧ್ಯವಿಲ್ಲ. ಈ ಹೋರಾಟದ ಮುಂಚೂಣಿಯಲ್ಲಿರುವ ಜವಾಬ್ದಾರಿ ಈಗ ಕಾರ್ಮಿಕ ವರ್ಗದ ಮೇಲಿದೆ. ಪಂಜಾಬ್, ಅಸ್ಸಾಂ, ಡಾರ್ಜಿಲಿಂಗ್‌ಗಳಲ್ಲಿ ನಮ್ಮ ಸಂಗಾತಿಗಳು ತೋರಿಸಿಕೊಟ್ಟಿರುವ ಉದಾಹರಣೆಯನ್ನು ಅನುಸರಿಸಿ ಈ ಸವಾಲನ್ನು ಎದುರಿಸಬೇಕೆಂದು ಸಿ.ಐ.ಟಿ.ಯು. ಎಲ್ಲಾ ಕಾರ್ಮಿಕ ಸಂಘಗಳಿಗೆ ಮತ್ತು ಎಲ್ಲಾ ವಿಭಾಗಗಳ ಕಾರ್ಮಿಕರಿಗೆ ಕರೆ ನೀಡುತ್ತದೆ.

ಜನತೆಯ ಹಿತಾಸಕ್ತಿಗಳ, ಕಾರ್ಮಿಕರ ಹಾಗೂ ರೈತರ ರಕ್ಷಣೆಯಲ್ಲಿ ಮಾತ್ರವಲ್ಲ, ವಿಚ್ಛಿದ್ರಕಾರಿಗಳ ವಿರುದ್ಧ ಹೋರಾಟದಲ್ಲಿ ಕೂಡಾ ಗಮನಾರ್ಹ ಸಾಧನೆ ತೋರಿರುವ ಪಶ್ಚಿಮ ಬಂಗಾಳ ಹಾಗೂ ಕೇರಳದ ಎಡರಂಗ ಸರ್ಕಾರಗಳಿಗೆ ಸಿ.ಐ.ಟಿ.ಯು.ವಿನ ಹಾರ್ದಿಕ ಶುಭಾಶಯಗಳು. ಸಿ.ಪಿ.ಐ. (ಎಂ) ಮುಖಂಡ ಹಾಗೂ ಸಿ.ಐ.ಟಿ.ಯು. ಉಪಾಧ್ಯಕ್ಷ ಜ್ಯೋತಿ ಬಸುರವರ ನೇತೃತ್ವದ ಪಶ್ಚಿಮಬಂಗಾಳ ಮಂತ್ರಿಮಂಡಲ, ಡಾರ್ಜಿಲಿಂಗ್‌ನಲ್ಲಿ ಪ್ರತ್ಯೇಕವಾದಿಗಳನ್ನು ಎದುರಿಸಿ ಕೋಮು ಸಾಮರಸ್ಯ ಕಾಪಾಡುತ್ತಿರುವ ರೀತಿ ಎಲ್ಲರ ಪ್ರಶಂಸೆ ಪಡೆದಿದೆ. ಈ ಎಡರಂಗ ಸರ್ಕಾರಗಳ ವಿರುದ್ಧ ಕೇಂದ್ರದ ಪಕ್ಷಪಾತ ಧೋರಣೆಯನ್ನು ಸಿ.ಐ.ಟಿ.ಯು. ಖಂಡಿಸುತ್ತದೆ.

ಕಳೆದೊಂದು ವರ್ಷಗಳಲ್ಲಿ

ಕಳೆದ ಮೇದಿನದ ನಂತರದ ಈ ಒಂದು ವರ್ಷ ಭಾರತದ ಬರಪೀಡಿತ ರೈತನಿಗೆ ಅತ್ಯಂತ ಸಂಕಷ್ಟಮಯ ವರ್ಷ. ಬರ ಪರಿಹಾರ ಕೇವಲ ಪೊಳ್ಳು ಮಾತಾಗಿದೆ, ಪರಿಹಾರ ಸಂಘಟಿಸುವಲ್ಲಿ ರಾಜೀವ ಸರ್ಕಾರದ ನಿರ್ಲಕ್ಷ್ಯ, ಭ್ರಷ್ಟಾಚಾರದಿಂದಾಗಿ ಲಕ್ಷಾಂತರ ಜನ ಹಸಿವಿನಿಂದ ಬಳಲುತ್ತಿದ್ದಾರೆ. ಹಸಿವಿನಿಂದ ಜನ ಸತ್ತಿರುವ ಸುದ್ದಿಗಳು ಬರುತ್ತಿವೆ. ಸಿ.ಐ.ಟಿ.ಯು ಸರಕಾರದ ಈ ನಿರ್ಲಕ್ಷ್ಯವನ್ನು ಖಂಡಿಸುತ್ತದೆ ಹಾಗೂ ರೈತಾಪಿ ವರ್ಗದ ಸಂಕಷ್ಟ ಪರಿಹಾರಕ್ಕೆ ಸಕಲ ನೆರವು ನೀಡಲು, ಸರ್ಕಾರದಿಂದ ಸರಿಯಾದ ಪರಿಹಾರಕ್ಕಾಗಿ ಒತ್ತಾಯಿಸಲು ಒಕ್ಕಟ್ಟಿನಿಂದ ಮುಂದಾಗಬೇಕೆಂದು ಕಾರ್ಮಿಕ ಆಂದೋಲನಕ್ಕೆ ಸಮಸ್ತ ಕಾರ್ಮಿಕ ವರ್ಗಕ್ಕೆ ಕರೆನೀಡುತ್ತದೆ. ರೈತರ ರಕ್ಷಣೆಗಾಗಿ ಕಾರ್ಮಿಕ ವರ್ಗ ತನ್ನ ದನಿಯೆತ್ತಲು ಸಾಕಷ್ಟು ಕೆಲಸ ಮಾಡಿಲ್ಲ, ಅದು ಐಕ್ಯತೆಯಿಂದ ಕಾರ್ಯಾಚರಣೆಗಿಳಿದಿದ್ದರೆ ಸರ್ಕಾರದ ಧೋರಣೆಗಳ ಮೇಲೆ ಪ್ರಭಾವ ಬೀರಿ ಅದನ್ನು ರೈತರಿಗೆ ಸಾಕಷ್ಟು ಪರಿಹಾರದತ್ತ ಬದಲಿಸಲು ಸಾಧ್ಯವಿತ್ತು ಎಂದು ಸಿ.ಐ.ಟಿ.ಯು ಭಾವಿಸುತ್ತದೆ.

ತ್ರಿಪುರಾದಲ್ಲಿ ಕಾಂಗ್ರೆಸ್ (ಐ) ಮಂತ್ರಿಮಂಡಲದ ಭಯೋತ್ಪಾದಕ ಆಳ್ವಿಕೆಯನ್ನು ಸಿ.ಐ.ಟಿ.ಯು. ಬಲವಾಗಿ ಖಂಡಿಸುತ್ತದೆ. ಹಾಗೂ ತ್ರಿಪುರಾದ ಗಿರಿಜನರು ಮತ್ತು ಇತರ ಜನವಿಭಾಗಗಳು.

(2ನೇ ಪುಟ ನೋಡಿ)

ಬೀಡಿ ಕೆಲಸಗಾರರ ಮಹಾ ಸಭೆ

ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ 6ನೇ ವಾರ್ಷಿಕ ಮಹಾಸಭೆ ಮಾರ್ಚ್ 13ರಂದು ಅಧ್ಯಕ್ಷ ಸುಂದರ ಮಯಸ್ಕರ ಅಧ್ಯಕ್ಷತೆಯಲ್ಲಿ ಸೇರಿತು.

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ ಕಾರ್ಯದರ್ಶಿ ಕಾ|| ಯು.ಬಿ. ಲೋಕಯ್ಯನವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ದೇಶದ ರಾಜಕೀಯ ಪರಿಸ್ಥಿತಿ ವಿವರಿಸಿ ಬೀಡಿ ಸಂಘ ಬಲಪಡಿಸಲು ಕರೆ ನೀಡಿದರು.

ಪ್ರಸಕ್ತ ಸಾಲಿಗೆ ಕಾ|| ಸುಂದರ ನಾಯ್ಕ (ಅಧ್ಯಕ್ಷ) ಸುಂದರಿದಾಸ್, ಲೀನಾ ಡಿ. ಕೋಸ್ತಾ (ಉಪಾಧ್ಯಕ್ಷರು) ವಾಸುದೇವ ಆಚಾರಿ (ಕಾರ್ಯದರ್ಶಿ) ಸದಾಶಿವದಾಸ್, ಸರೋಜಿನಿ (ಜೊತೆ ಕಾರ್ಯದರ್ಶಿಗಳು) ಬಾಲಕೃಷ್ಣ ಶೆಟ್ಟಿ, ಕೋಶಾಧಿಕಾರಿಯಾಗಿರುವ 21 ಮಂದಿ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು.

ಬಿ. ಜೆ. ಪಿ. ಅಧಿವೇಶನ

ಜನತಂತ್ರ-ವಿರೋಧ ಮತ್ತು ಪ್ರತಿಗಾಮಿತನ ಬಯಲು

ಏಪ್ರಿಲ್ 11 ರಂದು ಕೊನೆಗೊಂಡ ಬಿ.ಜೆ.ಪಿ.ಯ ದ್ವೈವಾರ್ಷಿಕ ಅಧಿವೇಶನ-ಪಕ್ಷದ ಪ್ರಜಾಪ್ರಭುತ್ವ-ವಿರೋಧಿ ಧೋರಣೆ, ನಮ್ಮ ದೇಶದ ವಿರುದ್ಧ ಸಾಮ್ರಾಜ್ಯಶಾಹಿ ಪಿತೂರಿಗಳ ಬಗ್ಗೆ ನಿರ್ಲಕ್ಷ, ಜಾತ್ಯತೀತತೆಯ ಮುಸುಕಿನಲ್ಲಿ ಕೋಮುವಾದಿ ಧೋರಣೆ, ಕಮ್ಯುನಿಸ್ಟ್ ವಿರೋಧಿ ದ್ವೇಷ, ಇವೆಲ್ಲದಕ್ಕಿಂತಲೂ ಹೆಚ್ಚಾಗಿ ರಾಜೀವ ಗಾಂಧಿಯ ವಿರುದ್ಧ ಹೋರಾಡುವ ಬಗ್ಗೆ ಪೊಳ್ಳು ಹೆಗ್ಗಳಿಕೆ ಇವುಗಳನ್ನು ಬಯಲು ಪಡಿಸಿದೆ.

ರಾಜೀವ ಗಾಂಧಿ ಸರ್ಕಾರದ ತಪ್ಪು ಒಪ್ಪುಗಳ ಬಗ್ಗೆ, ಅಪರಾಧಗಳ ಬಗ್ಗೆ ಕೌನ್ಸಿಲ್‌ನ ರಾಜಕೀಯ ನಿರ್ಣಯ ಘರ್ಜಿಸಿದೆ, ಭರ್ಜರಿ ಶಬ್ದಗಳಿಂದಲೇ ಪರಿಣಾಮವಾಗುವುದಿದ್ದರೆ ಈ ನಿರ್ಣಯದಿಂದ ರಾಜೀವ ಸರ್ಕಾರ, ಅದರ ಸಮರ್ಥಕರು ಇತ್ಯಾದಿಗಳು ಹೇಳ ಹೆಸರಿಲ್ಲದಂತೆ ನಾಶವಾಗುತ್ತಿದ್ದರು. ಆದರೆ ಭಾರಿ ಭರ್ಜರಿ ಮಾತುಗಳ ಘರ್ಜನೆಯ ನಂತರವೂ ಈ ನಿರ್ಣಯ ರಾಜೀವ ಗಾಂಧಿಯ ರಾಜೀನಾಮೆ ಬೇಡಿಕೆ ಮುಂದಿಡುವುದಿಲ್ಲ; ಅಲ್ಲಿ ಸೇರಿದ್ದ ಆರೆಸ್ಸೆಸ್ ಸದಸ್ಯರು ತಮ್ಮ ಗುರು ಬಾಳಾಸಾಹೇಬ್ ದೇವರಸ್‌ರ ರಾಜೀವಗಾಂಧಿ ಸರ್ಕಾರಕ್ಕೆ ಯಾವುದೇ ಬದಲಿ ಸಾಧ್ಯವಿಲ್ಲವೆಂಬ ಹೇಳಿಕೆಯನ್ನು ಜೆಹಪಿಸಿಕೊಂಡಿದ್ದರು. ಯಾರು ತಾನೇ ಗುರುವಿನ ನೀತಿ, ಹೇಳಿಕೆಯನ್ನು ಮೀರಬಲ್ಲರು? ಗುರುವಿನ ಮುಂದೆ ಪ್ರಜಾಪ್ರಭುತ್ವ ಬಹುಮತ ನಿರ್ಧಾರ, ಮತಾಧಿಕಾರ ಯಾವುದೂ ನಡೆಯಲಿಲ್ಲ. ಇವೆಲ್ಲಾ ಸಾರ್ವಜನಿಕವಾಗಿ ಮಾತನಾಡಲು ಮಾತ್ರ, ಪಕ್ಷದ ಸಂಘಟನೆಯೊಳಗೆ ಇವಕ್ಕೆ ಯಾವ ಸ್ಥಾನವೂ ಇಲ್ಲ. ರಾಜೀವ ಗಾಂಧಿಯ ತರಹವೇ, ಗುರುವಿಗೆ ವಿರುದ್ಧ ಹೋಗುವ ಧೈರ್ಯ ತೋರಿಸಿದ, ಎಲ್.ಕೆ. ಅದ್ವಾನಿಯೂ ಈ ನಿರ್ಣಯದ ಬಗ್ಗೆ ತೆಪ್ಪಗಿರಬೇಕಾಯ್ತು.

ರಾಜಕೀಯ ನಿರ್ಣಯ ಭರ್ಜರಿ ದಸ್ತಾವೇಜು. ರಾಜೀವ ಗಾಂಧಿ ಸರ್ಕಾರ ಪ್ರಜಾಪ್ರಭುತ್ವದ ವಿರುದ್ಧ ನಡೆಸಿರುವ ಅಪಚಾರಗಳನ್ನೆಲ್ಲಾ ಪಟ್ಟಿ ಮಾಡುತ್ತದೆ. ಪಾರ್ಲಿಮೆಂಟು ಮತ್ತು ಉಪಾಧ್ಯಕ್ಷರ ಬಗ್ಗೆ ತೋರಿದ ಅಗೌರವದಿಂದ ಹಿಡಿದು, 59ನೇ ಸಂವಿಧಾನ ತಿದ್ದುಪಡಿಯ ವರೆಗೆ ಎಲ್ಲಾ ಈ ಪಟ್ಟಿಯಲ್ಲಿದೆ. ಪ್ರಜಾಸತ್ತಾತ್ಮಕ ಜನರನ್ನು ಆಕರ್ಷಿಸಲು ಇವೆಲ್ಲಾ ಇದೆ, ಆದರೆ ತಾಪತ್ರಯವಿರುವುದು ಕೊನೆಯಲ್ಲಿ. ನಿರ್ಣಯ ರಾಜೀವರ ರಾಜೀನಾಮೆ ಕೇಳುವುದಿಲ್ಲ. ಚುನಾವಣೆಯನ್ನು ಸಹ ರಾಜೀವ ಮರ್ಜಿಗೆ ಬಿಟ್ಟು ಕೊಡುತ್ತದೆ, ನಿರ್ಣಯ ಹೇಳುವುದಿಷ್ಟೆ, "ಸರ್ಕಾರದ ಹೆಚ್ಚುತ್ತಿರುವ ಪಾಪಗಳ ವಿರುದ್ಧ ಬಿ.ಜೆ.ಪಿ. ಎಡೆಬಿಡದ ಪ್ರಚಾರ ಮಾಡುತ್ತದೆ, ಚುನಾವಣೆಯ ಸಂದರ್ಭ ಬಂದಾಗ ಹರ್ಷಾಣದಂತೆ ಜನರ ಕೋಪ ತೋರಿಸಲು ಸಾಧ್ಯವಾಗುವುದೇ ಇದರ ಉದ್ದೇಶ."

ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳೆಲ್ಲಾ ರಾಜೀವಗಾಂಧಿ ಸರ್ಕಾರದ ರಾಜೀನಾಮೆಗೆ ಒತ್ತಾಯಿಸುತ್ತಿರುವಾಗ ಇಂತಹ ಪೀಚು ರಾಜಕೀಯ ನಿರ್ಧಾರ. ಈ ಒತ್ತಾಯಕ್ಕೆ ಫೆಬ್ರವರಿ 23, ಮಾರ್ಚ್ 15 ರಂದು ಭರ್ಜರಿ ಪ್ರದರ್ಶನಗಳು ನಡೆದಿವೆ. ಆದರೆ ಈ ಒತ್ತಾಯಕ್ಕೆ ಬಿ.ಜೆ.ಪಿ.ಯ ಬೆಂಬಲವಿಲ್ಲ. ಹೀಗಿರುವಾಗ ಕಾಂಗ್ರೆಸ್ ವಿರುದ್ಧ ಹೋರಾಟದಲ್ಲಿ ಬಿ.ಜೆ.ಪಿ.ಯನ್ನು ನಂಬಬಹುದೇ? 1980 ಚುನಾವಣೆಯಲ್ಲಿ ಆರೆಸ್ಸೆಸ್ ಇಂದಿರಾ ಗಾಂಧಿಯವರನ್ನು ಬೆಂಬಲಿಸಲು ತಯಾರಿತ್ತು. ಈಗಾಗಲೇ ಕಾಂಗ್ರೆಸ್ ಏಜೆಂಟರು ಮತ್ತು ಆರೆಸ್ಸೆಸ್ ನಡುವೆ ಒಪ್ಪಂದವೊಂದಕ್ಕಾಗಿ ಗುಪ್ತ ಮಾತುಕತೆ ನಡೆಯುತ್ತಿದೆ ಎಂದು ತಿಳಿದು ಬಂದಿದೆ.

ಆದರೂ ಕಮ್ಯುನಿಸ್ಟರು ರಾಜೀವ ಗಾಂಧಿಯನ್ನು 'ಜಾಮೀನಿ'ನಲ್ಲಿ ಬಿಟ್ಟಿದ್ದಾರೆ ಎಂದು ಆಪಾದಿಸಲು ಅದ್ವಾನಿಯವರಿಗೆ ಯಾವುದೇ ಮುಲಾಜು ಇಲ್ಲ. ಈವರೆಗೆ ಬುರುಡೆ ಹೊಡೆಯುವುದು ರಾಜೀವ್‌ಗಾಂಧಿಯವರಿಗೆ ಮಾತ್ರ ಕರಗತವಾದ ಕಲೆ ಎಂದಿದ್ದಾರೆ. ಅದ್ವಾನಿಯವರೂ ಅವರನ್ನು ಸೇರಿಕೊಂಡಿದ್ದಾರೆ.

ಬಾಳಾಸಾಹೇಬ್ ದೇವರಸ್ ಅಣತಿಯಿದ್ದಾಗ್ಯೂ ಅದ್ವಾನಿ ರಾಜೀವ ಗಾಂಧಿಗೆ ತಾವೇ ಬದಲಿ ಕೊಡುವುದಾಗಿ ಹೇಳಿಕೊಂಡಿದ್ದಾರೆ. ಆದರೆ ಈ ಬದಲಿ ಕೊಡಲು ಬಿ.ಜೆ.ಪಿ. ಪಕ್ಷ ಏನು ಮಾಡಿದೆ?

ಬಿ. ಜೆ. ಪಿ. ಯ ನಾಯಕತ್ವದ ಸಂದರ್ಭ ಸಾಧಕತನ ಇಲ್ಲಿಗೆ ಮುಗಿಯಲಿಲ್ಲ; ನಿರ್ಣಯ ಅಮೆರಿಕಾ ನಮ್ಮ ದೇಶದ ವಿರುದ್ಧ ಹೂಡುತ್ತಿರುವ ಪಿತೂರಿಗಳ ಬಗ್ಗೆ ಸೊಲ್ಲೆತ್ತಿಲ್ಲ. ರಾಜೀವ ಗಾಂಧಿ ಸಾರ್ವಜನಿಕ ಕ್ಷೇತ್ರವನ್ನು ನಾಶ ಮಾಡುತ್ತಿರುವುದರ ಬಗ್ಗೆ, ವಿಶ್ವಬ್ಯಾಂಕ್‌ನ ಒತ್ತಡಕ್ಕೆ ಮಣಿದು ಖಾಸಗಿ ಬಂಡವಾಳ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶದ ಆರ್ಥಿಕತೆಯನ್ನು ತೆರೆದಿಟ್ಟಿರುವ ಬಗ್ಗೆ ಯಾವುದೇ ವಿರೋಧ ವ್ಯಕ್ತಪಡಿಸುತ್ತಿಲ್ಲ. ಅಮೇರಿಕ ನಮ್ಮ ರಕ್ಷಣಾ ಕ್ಷೇತ್ರದಲ್ಲಿ ನುಸುಳುತ್ತಿರುವುದರ ಬಗೆಗೂ ಅವರಿಗೆ ಯಾವುದೇ ಕಾಳಜಿ ಇಲ್ಲ. ಇವೆಲ್ಲಾ ಆಶ್ಚರ್ಯಕರವೇನಲ್ಲ. ಬಿ.ಜೆ.ಪಿ, ಯಾವತ್ತೂ ಖಾಸಗಿ ಬಂಡವಾಳದ ಸಮರ್ಥಕ,

ಬಿ.ಜೆ.ಪಿ. ನಾಯಕ ಅದ್ವಾನಿ ಸಹ ಕಾಂಗ್ರೆಸ್-ರಾಜೀವರಂತೆ ಬಡರೈತ, ಕೃಷಿ ಕೂಲಿಕಾರರ ಶೋಷಣೆಯ ಬಗ್ಗೆ ಮೌನವಾಗಿದ್ದು –ಕೆಲವು ಶ್ರೀಮಂತ ರೈತರು ಮತ್ತು ಭೂ ಮಾಲೀಕರ ಸಮಸ್ಯೆಗಳ ಬಗ್ಗೆ ಮಾತ್ರ ಪ್ರಸ್ತಾಪ ಮಾಡುತ್ತಾರೆ. ಏಕೆಂದರೂ ತಮ್ಮ ವರ್ಗ ಹಿತಾಸಕ್ತಿ ಮುಚ್ಚಿಡುವುದು ಕಷ್ಟ.

ಹತ್ತಿಗಿರಣಿ ಮತ್ತು ಸಣಬು ಕೈಗಾರಿಕಾ ಕಾರ್ಮಿಕರ ಸಾಮಾನ್ಯ ಬೇಡಿಕೆಯಾದ ರಾಷ್ಟ್ರೀಕರಣಕ್ಕೂ ಬಿ.ಜೆ.ಪಿ. ಬೆಂಬಲವಿಲ್ಲ. ಕೈಗಾರಿಕಾ ಸಮಸ್ಯೆಗಳಿಗೆ, ದುಸ್ಥಿತಿಯಲ್ಲಿರುವ ಕಾರ್ಖಾನೆಗಳನ್ನು ಕಾರ್ಮಿಕರಿಗೆ ಬಿಟ್ಟುಕೊಡುವುದು. ಬಿ.ಜೆ.ಪಿ.ಯ ಪರಿಹಾರ. ಕೆಲಸದ ಹಕ್ಕಾಗಲಿ, ನಿರುದ್ಯೋಗ ಪರಿಹಾರಕ್ಕೆ ಒತ್ತಾಯವಾಗಲಿ ಇಲ್ಲ.

ಬಿ.ಜೆ.ಪಿ, ಅಧ್ಯಕ್ಷ, ಕೇಂದ್ರ-ರಾಜ್ಯ ಸಂಬಂಧಗಳ ಬಗ್ಗೆ ಕಮ್ಯುನಿಸ್ಟರ ನೀತಿ ದೇಶದ ಐಕ್ಯತೆಗೆ ಮಾರಕವಾಗಿದೆ ಎಂದು ಟೀಕಿಸಲು ಮರೆಯುವುದಿಲ್ಲ. ಆದರೆ ಈ ರೀತಿ ಟೀಕಿಸುವ ರಭಸದಲ್ಲಿ ತಾನು ನಿಜವಾದ ಫೆಡರಲ್ ಪದ್ಧತಿಗೆ ವಿರುದ್ಧ ಅತಿ-ಕೇಂದ್ರೀಕೃತ ಬಲ್ಲಾಢ್ಯ ಕೇಂದ್ರಕ್ಕೆ ಬೆಂಬಲಿಗ ಎಂದು ಬಯಲುಗೊಳಿಸಿಕೊಂಡಿದೆ.

ಪಂಜಾಬಿನಲ್ಲಿ ಭಯೋತ್ಪಾದಕರ ವಿರುದ್ಧ ಸಿಪಿಐ(ಎಂ) ಸಿಪಿಐ ಮತ್ತು ಎಡ ಸಾಮೂಹಿಕ ಸಂಘಟನೆಗಳ ಹೋರಾಟವನ್ನು ಎಲ್ಲಾ ಜನರೂ, ವಿರೋಧ ಪಕ್ಷಗಳು ಮುಕ್ತಕಂಠದಿಂದ ಹೊಗಳಿದ್ದಾರೆ, ಆದರೆ ಬಿ.ಜೆ.ಪಿ. ಇದರ ಬಗ್ಗೆ ಪ್ರಸ್ತಾಪ ಮಾಡಲೂ ತಯಾರಿಲ್ಲ. ಪಂಜಾಬ್ ಸಮಸ್ಯೆಗೆ ಬಿ.ಜೆ.ಪಿ.ಯ ಪರಿಹಾರ ಗಡಿಯಲ್ಲಿ ಭದ್ರತಾ ಪಟ್ಟಿಯ ರಚನೆ. ಈ ಕ್ರಮವೂ ಕಾಂಗ್ರೆಸ್‌ನಂತೆ ಆಡಳಿತಾತ್ಮಕ ಕ್ರಮಗಳ ಮೇಲೆ ಅವಲಂಭಿಸುವುದು ಅಲ್ಲದೆ ಮತ್ತೇನಲ್ಲ; ಪಂಜಾಬಿನ ಜನರನ್ನು ಭಯೋತ್ಪಾದಕರ ವಿರುದ್ಧ ಹೋರಾಟದಲ್ಲಿ ರಾಜಕೀಯವಾಗಿ ತೊಡಗಿಸುವ ಯಾವ ಸ್ಪಷ್ಟ ಕ್ರಮಗಳ ಪ್ರಸ್ತಾಪವಿಲ್ಲ.

ಬಿ.ಜೆ.ಪಿ. ಯ ಆರೆಸ್ಸೆಸ್ 'ಆತ್ಮ' ಇಣುಕು ಹಾಕುವುದು ಜಾತ್ಯಾತೀತತೆಯ ಪ್ರಶ್ನೆಯಲ್ಲಿ. ಅದ್ವಾನಿ ಬಿ.ಜೆ.ಪಿ, 'ಧಾರ್ಮಿಕ ಪ್ರಭುತ್ವ'ವನ್ನು ನಿರಾಕರಿಸುತ್ತದೆ ಎಂದು ಹೇಳುವ ಮೂಲಕ ತಾವೂ ಜಾತ್ಯಾತೀತ ಎಂದು ತೋರಿಸಿಕೊಳ್ಳ ಬಯಸುತ್ತಾರೆ. ಆದರೆ "ಸಂವಿಧಾನ ಕರ್ತರು ಜಾತ್ಯಾತೀತ ಪ್ರಭುತ್ವ ವೆಂದರೆ ಧರ್ಮ ರಹಿತ ಪ್ರಭುತ್ವ ವಾಗಿರಬೇಕೆಂದು ಬಯಸಲಿಲ್ಲ. ಜಾತ್ಯಾತೀತ ಪ್ರಭುತ್ವವೆಂದರೆ ಹಿಂದೂವಾಗಿರುವ ದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಮರೆತುಬಿಡುವುದಿಲ್ಲ" ಎಂದು ಸೇರಿಸಲು ಮರೆಯುವುದಿಲ್ಲ; ಅಂದರೆ ಬಿ.ಜೆ.ಪಿ. ಭಾರತೀಯ ಪ್ರಭುತ್ವದಲ್ಲಿ ಹಿಂದೂ ಸಂಸ್ಕೃತಿ ಪ್ರಮುಖವಾಗಿರಬೇಕೆಂದು ಬಯಸುತ್ತದೆ. ಅದನ್ನು ಧಾರ್ಮಿಕ ಅಲ್ಪಸಂಖ್ಯಾತರು ಒಪ್ಪಲಿ, ಬಿಡಲಿ. ಇದು ಯಾವ ರೀತಿಯ ಜಾತಾತೀತತೆ?

ಪ್ರತ್ಯೇಕತಾವಾದದ ಬಗ್ಗೆ ಬಿ.ಜೆ.ಪಿ ಯ ಕಾಳಜಿಯ ಅಭಾವ ಸಹ ಅಷ್ಟೇ ರಾಷ್ಟ್ರ ವಿರೋಧಿ ಮತ್ತು ಪ್ರತಿಗಾಮಿಯಾದುದು. ಪ್ರತ್ಯೇಕತಾವಾದದ ಅಪಾಯದ ಬಗ್ಗೆ ಸೊಲ್ಲಿಲ್ಲ. ಗೂರ್ಖಾಲ್ಯಾಂಡ್ ಆಗಲಿ, ಘೀಸಿಂಗ್‌ನ ಸವಾಲಿನ ಬಗೆಗಾಗಲಿ ರಾಜಕೀಯ ನಿರ್ಣಯದಲ್ಲಿ ಯಾವುದೇ ಪ್ರಸ್ತಾಪವಿಲ್ಲ.

ಅಲ್ಪ ಮತೀಯ ಮುಸ್ಲಿಮರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಬಿ.ಜೆ.ಪಿ. ಯ ನಿರ್ಲಕ್ಷ ಗಮನಿಸುವಂತಹದ್ದು. ಮಲಿಯಾನದಲ್ಲಿ ಮುಸ್ಲಿಮರ ನರಮೇಧ, ಅಹ್ಮದಾಬಾದ್‌ನಲ್ಲಿ ಕೋಮು ಗಲಭೆಗಳು, ಮಹಾರಾಷ್ಟ್ರದಲ್ಲಿ ಶಿವಸೇನಾದ ಮುಸ್ಲಿಂ-ವಿರೋಧಿ ಪ್ರಚಾರದ ಬಗ್ಗೆ ಯಾವುದೇ ದೇಶಪ್ರೇಮಿ ತಲೆತಗ್ಗಿಸಬೇಕು. ಆದರ ಬದಲು ಬಿ.ಜೆ.ಪಿ. ರಾಜೀವ ಸರ್ಕಾರವನ್ನು ಮುಸ್ಲಿಮ ಅಲ್ಪಮತೀಯರಿಗೆ 'ಸಲಿಗೆ' ಕೊಡುತ್ತಿದೆ, ಎಂದು ಆಪಾದಿಸುತ್ತಾರೆ. ಮುಸ್ಲಿಂ ಮತಾಂಧ ನಾಯಕರಿಗೆ ಮಾತ್ರ ಸಮಾಧಾನ ಮಾಡುವ ಸರ್ಕಾರ, ಮುಸ್ಲಿಂಜನರನ್ನು ದಮನಮಾಡುತ್ತದೆ ಎಂದು ಹೇಳಲು ತಯಾರಿಲ್ಲ. 'ಶಾಹಾಬಾನು' ಬಗ್ಗೆ ಪ್ರಸ್ತಾಪಿಸುವ ನಿರ್ಣಯ, ಬಾಬ್ರಿ ಮಸೀದಿ–ರಾಮಜನ್ಮಭೂಮಿಯ ಬಗ್ಗೆ ಸರ್ಕಾರದ ನೀತಿಯನ್ನು ಟೀಕಿಸುವುದಿಲ್ಲ; ಮುಸ್ಲಿಮರಿಗೆ 'ಸಲಿಗೆ' ಕೊಡುತ್ತಿದೆ ಎಂದು ಸರ್ಕಾರದ ಮೇಲೆ ಆಪಾದನೆಯ ಉದ್ದೇಶ, ಹಿಂದೂ ಕೋಮುವಾದಿ ಮುಸ್ಲಿ-ವಿರೋಧಿ ಭಾವನೆಗಳನ್ನು ಕೆರಳಿಸಿ ಅದನ್ನು ರಾಜೀವ ಸರ್ಕಾರದ ವಿರುದ್ಧ ಉಪಯೋಗಿಸಲು ಪ್ರಯತ್ನ ಅಷ್ಟೆ;

ಇಂತಹ ಪ್ರತಿಗಾಮಿ ಧೋರಣೆಗಳೊಂದಿಗೆ ತುಂಬಿರುವ ಬಿ.ಜೆ.ಪಿ. ರಾಜಕೀಯ ಬೆಳವಣಿಗೆಗಳೊಂದಿಗೆ ಹೆಜ್ಜೆ ಹಾಕಿ, ಪಕ್ಷದ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಿಲ್ಲ. ಮಾರ್ಚ್ 15ರ 'ಭಾರತ್ ಬಂದನ್ನು' ಮುಷ್ಕರ ಮುರಿಯುವುದು ಮತ್ತಿತರ ಕಾರ್ಯಾಚರಣೆಗಳ ಮೂಲಕ ಕಾಂಗ್ರೆಸ್ ಜತೆ ಸೇರಿ ವಿರೋಧಿಸಿರುವುದನ್ನು ಸಿ.ಪಿ.ಐ(ಎಂ) ಈಗಾಗಲೇ ಬಯಲುಗೊಳಿಸಿದೆ.

ಮುಖ್ಯ ರಾಜಕೀಯ ಧಾರೆಯಿಂದ ಬೇರೆಯಾಗುವ ಭಯ ಬಿ.ಜೆ.ಪಿ.ಯನ್ನು ಈಗ ಕಾಡುತ್ತಿದೆ. ಇದು ಇತರ ವಿರೋಧ ಪಕ್ಷಗಳ ಜತೆ ಸೇರ್ಪಡೆ ಕುರಿತು ಕೌನ್ಸಿಲ್‌ನಲ್ಲಿ ನಡೆದ ಚರ್ಚೆಯಲ್ಲಿ ವ್ಯಕ್ತವಾಗಿದೆ. ಆರೆಸ್ಸೆಸ್ ವಿರೋಧಿ ಗುಂಪು ರಾಜೀವ ಬಗ್ಗೆ ಆರೆಸ್ಸೆಸ್ ಮಂದ ನೀತಿ ಮತ್ತು ಕೋಮುವಾದಿ ನೀತಿ ಬಿ.ಜೆ.ಪಿ.ಯನ್ನು ಮೂಲೆ ಗುಂಪುಗೊಳಿಸುವ ಭಯದಿಂದ, ಇತರ ವಿರೋಧ ಪಕ್ಷಗಳ ಜತೆ ಸೇರ್ಪಡೆಗೆ ಒತ್ತಾಯಿಸಿತು, ಆದರೆ ಆರೆಸ್ಸೆಸ್ ನೀತಿಯೇ ಕೊನೆಗೆ ಅಂಗೀಕೃತವಾಗಿದ್ದು ಇತರ ವಿರೋಧ ಪಕ್ಷಗಳ ಜತೆ ಸಹಕಾರದ ಬಗ್ಗೆ ಮಾತ್ರ ನಿರ್ಣಯದಲ್ಲಿ ಪ್ರಸ್ತಾಪವಿದೆ. ಆದರೆ ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ರಾಜಕೀಯ ಚಟುವಟಿಕೆ ಹೆಚ್ಚಾದಂತೆ ಮತ್ತು ಜನರ ರಾಜಕೀಯ ಪ್ರಜ್ಞೆ ಹೆಚ್ಚುತ್ತಾ ಹೋದಂತೆ ಬಿ.ಜೆ.ಪಿ, ಹೆಚ್ಚೆಚ್ಚು ಒಂಟಿಯಾಗುತ್ತದೆ; ಈ ತರದ ಪ್ರತಿಗಾಮಿ ಮತ್ತು ದೇಶ ವಿರೋಧಿ ಸ್ವಭಾವ ಹೆಚ್ಚೆಚ್ಚು ಜನರಿಗೆ ಅರ್ಥವಾಗುತ್ತಾ ಹೋಗುತ್ತದೆ,

ರಶ್ಯನ್‌ರ ಮನಗೆದ್ದ ಕಥಕ್‌ನೃತ್ಯ

ಭಾರತದ ಕಥಕ್ ಕೇಂದ್ರ ನೃತ್ಯ ತಂಡವು ಉತ್ತರ ಕಾಕಾಸಸ್‌ನಲ್ಲಿನ ಅದ್ಯೆಗೆಯ್ ಸ್ವಾಯತ್ತ ವಲಯದ ರಾಜಧಾನಿ ಮೈಕೋವ್‌ನಲ್ಲಿ ಭಾರೀ ಯಶಸ್ಸು ಗಳಿಸಿದೆ. ಭಾರತೀಯ ಸಂಸ್ಕೃತಿಯಲ್ಲಿನ ಈ ಆಸಕ್ತಿಗೆ ಅದ್ಯೆಗೆಯ್‌ನ ಜನರು ಭಾರತೀಯ ಮೂಲದವರಾಗಿರುವುದೂ ಒಂದು ಕಾರಣವೆನ್ನಬಹುದು. ಪ್ರಾಕ್ತನ ಅವಶೇಷಗಳು ಮತ್ತು ಈ ದಿಸೆಯಲ್ಲಿನ ಸಂಶೋಧನೆಗಳು ಈಚೆಗೆ ಇದನ್ನು ತೋರಿಸಿಕೊಟ್ಟಿವೆ. ಸ್ಥಳೀಯ ಜಾನಪದ ಹಾಡೊಂದರ ಪ್ರಾರಂಭದ ಸಾಲುಗಳು ನಾವು ಉಲ್ಲಸಿತ ಭಾರತದಿಂದ ಬಂದವರು" ಎಂದಿವೆ,

ಕಥಕ್ ಕೇಂದ್ರ ತಂಡದ ಪ್ರದರ್ಶನಗಳು, ಅದರಲ್ಲೂ ಪ್ರಧಾನವಾಗಿ ಸ್ವರ್ಣಮುಖಿ ಭೂಪಾಲ್ ಅವರ ನಾಟ್ಯ ಜನರನ್ನು ಮಂತ್ರಮುಗ್ಧರನ್ನಾಗಿ ಮಾಡಿದುವು. ಸ್ಥಳೀಯ ಪತ್ರಿಕೆ ಭಾರತೀಯ ನರ್ತಕರಿಗೆ ಇನ್ನಾವ ಅತಿಥಿ ಕಲಾಕಾರರಿಗೂ ನೀಡದ ಪ್ರಚಾರ ನೀಡಿತು,

ಭಾರತೀಯ ಕಲಾಕಾರರ ಈ ಅಸಾಧಾರಣ ಯಶಸ್ಸಿಗೆ ಸೋವಿಯತ್ ಜನತೆ ಭಾರತೀಯರ ಬಗೆಗೆ ಹೊಂದಿರುವ ಗಾಢವಾದ ಪರಂಪರಾಗತ ಸ್ನೇಹಭಾವವೇ ಕಾರಣ ಎಂದೂ ಹೇಳಬಹುದಾಗಿದೆ. "ಅಲ್ಲಿ ನಮಗೆ ದೊರೆತ ಅತ್ಯಂತ ಆತ್ಮೀಯ ಸ್ವಾಗತದಿಂದ ನಾವು ಬಹಳಷ್ಟು ಸ್ಫೂರ್ತಿ ಹೊಂದಿದ್ದೇವೆ ಎಂದು ತಂಡದ ಮುಖ್ಯಸ್ಥ ಕ್ರಿಶನ್ ಮೋಹನ್‌ಮಿಶ್ರಾ ಅವರು ನೊವೊಸ್ತಿಗೆ ನೀಡಿರುವ ಸಂದರ್ಶನವೊಂದರಲ್ಲಿ ಹೇಳಿರುವರು.

ಕಾರ್ಲುಸಿ ಪ್ರವಾಸ

ರಾಜೀವ್ ಕೊರಳಿಗೆ ಗಂಟೆ

ಅಮೆರಿಕಾದ ರಕ್ಷಣಾ ಕಾರ್ಯದರ್ಶಿ, ಫ್ರಾಂಕ್ ಲೂಯಿಸ್‌ರವರ ಭಾರತ ಮತ್ತು ಪಾಕಿಸ್ತಾನಗಳ ಪ್ರವಾಸ ಇದೀಗ ತಾನೆ ಮುಗಿದಿದೆ. ಈ ನಲ್ವತ್ತು ವರ್ಷಗಳಲ್ಲಿ ಭಾರತಕ್ಕೆ ಭೇಟಿಕೊಟ್ಟ ರಕ್ಷಣಾ ಕಾರ್ಯದರ್ಶಿಗಳಲ್ಲಿ ಇವರು ಎರಡನೆಯವರು. ಈ ಹಿಂದೆ ವೇಯ್‌ನ್‌ಬರ್ಗರ್ 1986ರಲ್ಲಿ ಭೇಟಿ ನೀಡಿದ್ದರು.

ರಾಜೀವ್‌ಗಾಂಧಿಯವರ ಸರ್ಕಾರ ಇರುವಾಗಲೇ ಈ ಇಬ್ಬರು ಅಮೇರಿಕ ದೇಶದವರು ಬಂದು ಹೋದದ್ದು ಕುತೂಹಲಕರವಾದ ಅಂಶ. ಅಮೇರಿಕ ಮತ್ತು ರಾಜೀವ್ ಮಧ್ಯೆ ಇರಬಹುದಾದ ಒಡನಾಟದತ್ತ ಇದು ಬೆಳಕು ಚೆಲ್ಲುತ್ತದೆ. ಈ ಪ್ರವಾಸ ರಾಜೀವರನ್ನು ಅಮೆರಿಕಾದ ಬುಟ್ಟಿಗೆ ಹಾಕಿಕೊಳ್ಳುವ ಪ್ರಯತ್ನವಲ್ಲದೇ ಮತ್ತೇನೂ ಅಲ್ಲ. ತಂತ್ರಜ್ಞಾನ, ರವಾನೆ, ರಕ್ಷಣಾ ಸಹಕಾರ ಇವು ಸಿಹಿ ಲೇಪದ ಕಹಿ ಗುಳಿಗೆ.

ಕಾರ್ಲುಸಿಯವರ ಈ ಪ್ರವಾಸದುದ್ದದ ಮಾತುಕತೆಯೆಲ್ಲವೂ ಕೇವಲ ರಕ್ಷಣಾ ಸಹಕಾರದ ಸುತ್ತವೇ ಸುತ್ತುತ್ತಿತ್ತು. ಅಮೇರಿಕ ಪ್ರತಿಯೊಂದು ಸಹಕಾರ ನೀಡುತ್ತಲೇ ಅದರೊಂದಿಗೇ ಶರತ್ತುಗಳನ್ನು ಹಾಕುತ್ತಿದೆ. ಈ ಮಧ್ಯದಲ್ಲಿಯೇ ಪಾಕಿಸ್ತಾನಕ್ಕೆ ಅಮೇರಿಕಾ ಸರ್ವಬೆಂಬಲವನ್ನು ನೀಡಿ ಜಿಯಾ ಸರ್ಕಾರಕ್ಕೆ ಕುಮ್ಮಕ್ಕು ನೀಡುತ್ತಿದೆ. ಪಾಕಿಸ್ತಾನ್ ಸರ್ಕಾರದ ಭದ್ರತೆಗೆ ಇದು ಅಗತ್ಯ ಎಂದು ರಕ್ಷಣಾ ಕಾರ್ಯದರ್ಶಿ ಪತ್ರಕರ್ತರಿಗೆ ತಿಳಿಸಿದ್ದಾರೆ. ಅಫ್‌ಘಾನಿಸ್ತಾನದ ಒಪ್ಪಂದದ ನಂತರವೂ ಈ ಮಿಲಿಟರಿ ಅಸ್ತ್ರಗಳ ಸರಬರಾಜು ನಿರಂತರವಾಗಿ ಸಾಗುತ್ತದೆ ಎಂದು ಅವರು ಹೇಳಿದ್ದಾರೆ. ಅದಲ್ಲದೆ ಸೋವಿಯತ್‌ನ ಹೆದರಿಕೆಯಿಂದ ಪಾಕಿಸ್ತಾನ ಬಚಾವಾಗಲು ಇನ್ನಷ್ಟು ಆಧುನಿಕ ಅಸ್ತ್ರಗಳು ಬೇಕು ಎಂದು ಸಾರಿದ್ದಾರೆ.

ಪಂಜಾಬ್‌ನ ಖಲಿಸ್ತಾನ್‌ವಾದಿಗಳಿಗೆ ಪಾಕಿಸ್ತಾನ ಕುಮ್ಮಕ್ಕು ನೀಡುತ್ತಿರುವ ಬಗ್ಗೆ ವಿಚಾರ ಮಾಡಲು ಅಮೇರಿಕನ್ನರನ್ನು ರಾಜೀವ್‌ಗಾಂಧಿ ಕೇಳಿಕೊಂಡಿದ್ದಾರೆ. ಯಾರು ಪಾಕಿಸ್ತಾನದ ಸೂತ್ರಗಳನ್ನು ಹಿಡಿದುಕೊಂಡಿದ್ದಾರೋ ಅವರ ಬಳಿಯೇ ರಾಜೀವರ ದಯನೀಯ ಪ್ರಾರ್ಥನೆ ಅರ್ಥಹೀನ.

ವೀನ್‌ಬರ್ಗರ್ ಹಿಂದೆ ಭೇಟಿ ನೀಡಿದ್ದಾಗ ರಾಜೀವರಿಗೆ ಸಣ್ಣ ಪ್ರಮಾಣದಲ್ಲಿ ತಂತ್ರಜ್ಞಾನದ ನೆರವು ನೀಡುವ ಮಾತನಾಡುತ್ತಲೇ ಅಮೇರಿಕೆಗೆ ಅವಾಕ್ಸ್ ಯುದ್ಧ ವಿಮಾನಗಳನ್ನು ನೀಡಿದರು. ಭಾರತಕ್ಕೆ ಸಣ್ಣ ಗುಟುಕು ಎಸೆದು ಪಾಕಿಸ್ತಾನಕ್ಕೆ ಕೊಳ್ಳೆ ಚಿನ್ನ ನೀಡುವ ಉಪಾಯ ಅಮೇರಿಕದ್ದು. ಅದೇ ತಂತ್ರವನ್ನು ಕಾರ್ಲೂಸಿ ಈ ಬಾರಿಯ ಪ್ರವಾಸದಲ್ಲೂ ತೋರಿಸಿದ್ದಾರೆ. ಈ ಬಾರಿ ಪಾಕಿಸ್ತಾನಕ್ಕೆ ಇನ್ನೂ ಹೆಚ್ಚು ಯುದ್ಧಾಸ್ತ್ರಗಳು ದೊರೆಯಲಿವೆ. ಅಫ್‌ಘಾನಿಸ್ತಾನದ ಒಪ್ಪಂದ ಆದ ನಂತರವೂ ಈ ಅಸ್ತ್ರಗಳ ಬಳಕೆ ಯಾರ ವಿರುದ್ಧ?

'ವಾಷಿಂಗ್ಟನ್ ಪೋಸ್ಟ್', ಅಮೇರಿಕಾದ ದಿನಪತ್ರಿಕೆ ವರದಿ ಮಾಡಿರುವುದು ನಿಜವೇ ಆದರೆ ರಾಜೀವ್‌ಗಾಂಧಿಯವರೇ ಅಮೇರಿಕದ ಬೆನ್ನು ಬಿದ್ದು ಹೋಗಿರುವುದು ಖಂಡನೀಯ. ಪಾಕಿಸ್ತಾನ, ಭಾರತವನ್ನು ಅಮೇರಿಕಾದ ಕೊಡೆಯಡಿಯಲ್ಲಿ ತರಲು ಪ್ರಯತ್ನ ಸಾಗಿದೆ. ಕಾರ್ಲುಸಿ ದೆಹಲಿಯಲ್ಲಿ ಮಾತುಕತೆಯಲ್ಲಿರುವಾಗಲೇ ವಾಷಿಂಗ್ಟನ್ ಪಾಕಿಸ್ತಾನಕ್ಕೆ 343 ಮಿಲಿಯನ್ ಡಾಲರ್‌ಗಳ ಯುದ್ಧಾಸ್ತ್ರ F-16 ಫೈಟರ್‌ಗಳನ್ನು 360 ಮಿಸೈಲ್‌ಗಳನ್ನು ನೀಡುವ ಹೇಳಿಕೆ ನೀಡಿತು. ಇದು ಎಚ್ಚರಿಕೆಯ ಗಂಟೆ, ಕಾರ್ಲುಸಿ ಈ ಹಿಂದೆ ಸಿ.ಐ.ಎ. ಮುಖ್ಯಸ್ಥರಾಗಿದ್ದರೆಂಬುದನ್ನು ರಾಜೀವ್ ಮರೆಯಬಾರದು.

'ಟೆಲಿಗ್ರಾಫ್'ಗೆ ಛೀಮಾರಿ

ಟೆಲಿಗ್ರಾಫ್, ಕಲ್ಕತ್ತದ ದಿನಪತ್ರಿಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಕಾ|| ಬಿಪ್ಲವ್‌ದಾಸ್‌ಗುಪ್ತ ವಿರುದ್ಧ ಸೆಪ್ಟೆಂಬರ್ 87ರಲ್ಲಿ ಹುರುಳಿಲ್ಲದ ಆಪಾದನೆಗಳನ್ನು ಮಾಡಿ ಲೇಖನಗಳನ್ನು ಪ್ರಕಟಿಸಿತ್ತು. ಇದರ ವಿರುದ್ಧ ಬಿಪ್ಲವ್‌ದಾಸ್‌ಗುಪ್ತ ಭಾರತೀಯ ಪತ್ರಿಕಾ ಮಂಡಳಿಗೆ ದೂರು ಸಲ್ಲಿಸಿದ್ದರು. ದೂರಿನ ಬಗ್ಗೆ ವಿವರ ತನಿಖೆ ನಡೆಸಿದ ಪತ್ರಿಕಾ ಮಂಡಳಿ ಟೆಲಿಗ್ರಾಫ್‌ಗೆ ಛೀಮಾರಿ ಹಾಕಿದೆ.

ಪತ್ರಿಕಾ ಮಂಡಳಿಯು ಟೆಲಿಗ್ರಾಫ್‌ನಲ್ಲಿ ಪ್ರಕಟವಾದ ವರದಿಗಳು ಸುಳ್ಳೆಂದು ಯಾವುದೇ ಸತ್ಯವರದಿಯಿಂದ ಕೂಡಿಲ್ಲ ಎಂದಿದೆ. ಬಿಪ್ಲವ್‌ದಾಸ್‌ಗುಪ್ತ ವಿರುದ್ಧ ವ್ಯಕ್ತಿಗತವಾದ ಅಪಪ್ರಚಾರ ಮಾಡುವ ಉದ್ದೇಶವನ್ನು ಟೆಲಿಗ್ರಾಫ್ ಹೊಂದಿದೆ ಎಂದು ಪತ್ರಿಕಾ ಮಂಡಳಿ ಅಭಿಪ್ರಾಯಪಟ್ಟು ಬಿಪ್ಲವ್‌ದಾಸ್‌ಗುಪ್ತ ನೀಡಿದ ಉತ್ತರವನ್ನು ಪ್ರಕಟಿಸುವ ಗೋಜಿಗೆ ಪತ್ರಿಕೆ ಹೋಗಲಿಲ್ಲ ಎಂದಿದೆ.

ಪತ್ರಿಕೆಯ ನೀತಿಸಂಹಿತೆಯ ವಿರುದ್ಧ ಟೆಲಿಗ್ರಾಫ್ ನಡೆದುಕೊಂಡಲ್ಲಿ ಜನರ ಉಗ್ರಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ಛೀಮಾರಿ ಹಾಕಿದೆ.

ಎಡ ಐಕ್ಯತೆ ಮರೆತ ಸಿ. ಪಿ. ಐ.

ಇಡೀ ದೇಶದಾದ್ಯಂತ ರಾಜೀವ ಭ್ರಷ್ಟ ಅಧಿಕಾರವನ್ನು ಉರುಳಿಸುವ ಸನ್ನಾಹದಲ್ಲಿ ಎಡ-ಪ್ರಜಾಸತ್ತಾತ್ಮಕ ಪಕ್ಷಗಳು ನಿರಂತರವಾಗಿ ಭಾರತರಕ್ಷಿಸಿ, ಭಾರತ್ ಬಂದ್ ಕಾರ್ಯಕ್ರಮ ನಡೆಸುವ ತರಾತುರಿಯಲ್ಲಿದ್ದರೆ ಆಂಧ್ರ ಪ್ರದೇಶದಲ್ಲಿ ಸಿ.ಪಿ.ಐ. ಗೊತ್ತುಗುರಿಯಿಲ್ಲದಂತೆ ವರ್ತಿಸುತ್ತಿದೆ.

'ತೆಲುಗುದೇಶಂ' ವಿರುದ್ಧ ಸಮರ ಸಾರಿರುವ ಸಿಪಿಐನ ರಾಜ್ಯ ಸಮಿತಿ ತೆಲುಗುದೇಶಂ ಸರ್ಕಾರವನ್ನು ಕಿತ್ತೊಗೆದು ಮೂರನೆಯ ಶಕ್ತಿಯೊಂದನ್ನು ಹುಟ್ಟುಹಾಕಲು ಎಡಬಿಡದೆ ಪ್ರಯತ್ನಿಸುತ್ತಾ ಪರೋಕ್ಷವಾಗಿ ಕಾಂಗ್ರೆಗೆ ನೆರವಾಗುತ್ತಿದ್ದಾರೆ. ಇದಕ್ಕಾಗಿ ನಾಚಿಕೆಗೇಡು ವಿಧಾನವನ್ನೂ ಅನುಸರಿಸಿದ್ದಾರೆ. ಸಿಪಿಐನ ಈ ಕೃತ್ಯಗಳಿಗೆ ಜನತಾ ಲೋಕದಳ ಸಹ ಕುಮ್ಮಕ್ಕು ನೀಡುತ್ತಿದೆ.

ಇತ್ತೀಚಿನ ರಾಜ್ಯಸಭಾ ಚುನಾವಣೆಗಳಲ್ಲಿ ಸಿಪಿಐನ ಹಲವು ಕೃತ್ಯಗಳು ಹೊರಬಿತ್ತು. ಸಿಪಿಐ ಮತ್ತು ಜನತಾ ಚುನಾವಣೆಯನ್ನು ಗೆಲ್ಲಲು ಬಿಜೆಪಿ, ಮುಸ್ಲಿಂಲೀಗ್ ಸಹಾಯ ಪಡೆಯಲು ಸಹ ಹಿಂದೆಗೆಯಲಿಲ್ಲ. ಎಡರಂಗದ ಅಭ್ಯರ್ಥಿಯನ್ನೇ ಸಿಪಿಐ ಬೆಂಬಲಿಸಲಿಲ್ಲವೆಂಬುದು ವಿಷಾದಕರ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಲವು ಮನವಿಗಳ ನಂತರವೂ ಈ ಹಿಂದಿನ ಎಲ್ಲಾ ಚುನಾವಣೆಗಳಲ್ಲಿ ಎಡರಂಗದ ಜೊತೆ ಸೇರಿದಂತೆ ಸಿಪಿಐ ವರ್ತಿಸುತ್ತಿದೆ. ಆಂಧ್ರಪ್ರದೇಶದಲ್ಲಿ ಸಿ.ಪಿ.ಐ. ಪದೇ ಪದೇ ಅಸೆಂಬ್ಲಿಗೆ ಬಹಿಷ್ಕಾರ ಹಾಕುತ್ತಾ 'ಎನ್‌ಟಿಆರ್ ತೊಲಗಲಿ' ಚಳುವಳಿ ಹುಟ್ಟುಹಾಕಿದೆ.

ರಾಜೀವ್‌ಗಾಂಧಿಗೆ ಇದು ಕುಮ್ಮಕ್ಕು ನೀಡುತ್ತದೆ ಎಂಬುದನ್ನು ನೆನಪಿಸುತ್ತಾ ರಾಜ್ಯ ಸಮಿತಿಯು ಈ ಕಾರ್ಯದ ವಿರುದ್ಧ ಹೋರಾಡಲು ಕಾರ್ಯಕರ್ತರಿಗೆ ಕರೆ ನೀಡುತ್ತದೆ.

ಭಾರತ ಸಾಹಿತ್ಯ-ಸಂಸ್ಕೃತಿ ಪರಿಚಯಿಸುವ ಸಂಕಲನ

ಸೋವಿಯತ್ ರಾಷ್ಟ್ರದ ಮೊಲೊದಯಾ ಗ್ವಾರ್ದಿಯಾ ಪ್ರಕಾಶಕರು "ಅಮರ ಕಮಲ" ಎಂಬ ಕೃತಿಯೊಂದನ್ನು ಈಚೆಗೆ ಪ್ರಕಟಿಸಿದ್ದಾರೆ. ಈ ಕೃತಿ ಸೋವಿಯತ್ ಒಕ್ಕೂಟ ಮತ್ತು ಭಾರತದ ಆಧುನಿಕ ಸಾಹಿತ್ಯದ ಹಲವು ಸಂಪುಟಗಳ ಗ್ರಂಥ ಮಾಲಿಕೆಯಲ್ಲಿ ಮೊದಲನೆಯದು. ಕೃತಿ ಶ್ರೇಣಿಯಲ್ಲಿ ಸೋವಿಯತ್ ಮತ್ತು ಭಾರತದ ಸಾಹಿತಿಗಳ ಆಸಕ್ತಿಕರ ಕೃತಿಗಳು ಒಳಗೊಂಡಿ

'ಅಮರ ಕಮಲ' ಕೃತಿಯಲ್ಲಿ ಸೋವಿಯತ್ ಲೇಖಕರು ಪತ್ರಕರ್ತರು, ಕಲಾ ವಿಮರ್ಶಕರು, ವಿದ್ವಾಂಸರು, ಭಾರತದ ಸಾಂಸ್ಕೃತಿಕ ಕ್ಷೇತ್ರದ ಹೆಸರಾಂತ ವ್ಯಕ್ತಿಗಳು, ಭಾರತದ ಸ್ವಾತಂತ್ರ್ಯ ಚಳುವಳಿಯ ಮುಖಂಡರು ಬರೆದ ಮೌಲಿಕ ಬರಹಗಳಿವೆ.

ಭಾರತದ ಸಂಸ್ಕೃತಿ ಮತ್ತು ಪ್ರಕೃತಿ ಸೌಂದರ್ಯದಿಂದ ಪ್ರಭಾವಿತರಾಗಿ ಕೆ. ಬಾಲ್‌ಮೊಂತ್, ಐಬುನಿನ, ವಿ. ಬ್ರಿಯುಸೊವ್, ಎನ್. ಗುಮಿಲೆವ್ ಮುಂತಾದ ಕವಿಗಳು ರಚಿಸಿದ ಕವನಗಳು ಈ ಸಂಕಲನದಲ್ಲಿವೆ. ಸೋವಿಯತ್ ಕಲಾವಿದ ಬಿ.ಸ್ವಿರ್ನೊವ-ರುಸೆತ್ಸ್‌ಕೀ ಅವರು ನಿಕೊಲಾಯಿ ರೋರಿಚ್‌ರೊಂದಿಗೆ ನಡೆಸಿದ ಮಾತುಕತೆಗಳ ಸಾರ ಈ ಸಂಕಲನದಲ್ಲಿದೆ. ಇಬ್ಲಾವತ್ಸ್‌ಕಾಯಾ ಭಾರತದ ಪ್ರವಾಸ ಕಾಲದಲ್ಲಿ ತಮಗಾದ ಅನುಭವಗಳ ಕುರಿತು ಬರೆದಿರುವ ಪ್ರವಾಸ ಕಥನವೂ ಈ ಸಂಕಲನದಲ್ಲಿ ಅಡಕವಾಗಿದೆ.

'ಅಮರ ಕಮಲ' ಕೃತಿ ಭಾವನಾತ್ಮಕವಾಗಿಯೂ ಮೌಲಿಕ ಕೃತಿ. ಕೃತಿಯ ಸಂಕಲನಕಾರ ಎ. ಸೆಂಕೇವಿಚ್ ತುಂಬ ಶ್ರಮಪಟ್ಟು ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಸೋವಿಯತ್—ಭಾರತ ಸಂಬಂಧಗಳ ವಿವಿಧ ಮುಖಗಳನ್ನು ಸೋವಿಯತ್ ಜನತೆಗೆ ಪರಿಚಯ ಮಾಡಿಕೊಡುವ ಪ್ರಯತ್ನವೂ ಕೃತಿಯಲ್ಲಿದೆ. ಭಾರತೀಯ ಜನಜೀವನದ ಸೋವಿಯತ್ ಸಾಹಿತ್ಯದಲ್ಲಿ ಅಭಿವ್ಯಕ್ತವಾದಿರುವ ರೀತಿಯನ್ನು ತಿಳಿಸುವ ಪ್ರಯತ್ನವನ್ನು ಅವರು ಮಾಡಿದ್ದಾರೆ. ಲೇಖಕ ಎ. ಅಸ್ತಫಯೆವ್ ಅವರು ಬರೆದ ಹೃದಯಸ್ಪರ್ಶಿ ಕತೆಯೂ ಈ ಕೃತಿಯಲ್ಲಿ ಒಳಗೊಂಡಿವೆ. ರಶಿಯಾದ ಹಳ್ಳಿಯ ಹುಡುಗಿಯೊಬ್ಬಳು ತನ್ನ ಜೀವನದುದ್ದಕ್ಕೂ ಭಾರತದ ಬಗ್ಗೆ ಕಂಡ ಕನಸ್ಸಿನ ಚಿತ್ರಣ ಈ ಕತೆಯಲ್ಲಿದೆ. ಪ್ರಾಚೀನ ಕಾಲದಲ್ಲಿ ರಶಿಯಾ ಇತಿಹಾಸಕಾರರು ಭಾರತದ ಕುರಿತು ಬರೆದಿರಿಸಿದ ಐತಿಹಾಸಿಕ ವೃತ್ತಾಂತಗಳೂ ಕೃತಿಯಲ್ಲಿವೆ. ಅವುಗಳಲ್ಲಿ ಪ್ರಾಚೀನ ರಶಿಯಾದ ಸಾಹಿತಿ ಎ. ದೆಮಿನ್ ಅವರು ಬರೆದಿರುವ 'ಐತಿಹಾಸಿಕ ವೃತ್ತಾಂತಗಳು ಹೀಗೆ ಹೇಳುತ್ತವೆ". ಎಂಬ ಲೇಖನ ಗಮನಾರ್ಹ. ಅಂದವಾದ ಚಿತ್ರಗಳು ಪುಸ್ತಕದ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿವೆ.

★

ದ. ಕ. ಜಿಲ್ಲಾ ಹಂಚು ಕಾರ್ಮಿಕರ ಸಮಾವೇಶ

ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ಮತ್ತು ಕೈಗಾರಿಕಾ ನೀತಿಯ ಫಲವಾಗಿ ಜನರಲ್ಲಿ ಕೊಳ್ಳುವ ಶಕ್ತಿ ಕುಸಿಯುತ್ತಿದ್ದು ಸರ್ಕಾರದ ಜನವಿರೋಧಿ ನೀತಿಯ ವಿರುದ್ಧ ದುಡಿಯುವ ವರ್ಗ ಸಂಘಟಿತ ಐಕ್ಯ ಹೋರಾಟಕ್ಕೆ ಶ್ರಮಿಸ ಬೇಕೆಂದು ಸಿ. ಐ. ಟಿ. ಯು. ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ|| ಸಿ. ನಂಜುಂಡಪ್ಪನವರು ಕರೆ ನೀಡಿದರು.

ಮಂಗಳೂರಿನಲ್ಲಿ ನಡೆದ ದ. ಕ. ಜಿಲ್ಲಾ ಹಂಚು ಕಾರ್ಮಿಕರ ಜಿಲ್ಲಾ ಸಮಾವೇಶದಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಎಸ್. ಕೆ. ಟೈಲ್ಸ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಕಾ|| ಅಬ್ರಹಾಂ ಕರ್ಕಡ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಕಾ||ಕೆ. ಶಂಕರ ಅವರು ವರದಿ ಮಂಡಿಸಿದರು. ಕಾ|| ಕೆ. ಆರ್. ಶ್ರೀಯಾನ್, ಕೆ. ಮಸಬ್ಬ ರವರುಗಳು ಉಪಸ್ಥಿತರಿದ್ದರು.

ಕನಿಷ್ಠ ಕೂಲಿ ಪ್ರಕಟಣೆ ವಿರುದ್ಧ ಹಂಚು ಕೈದಾರಿಕೆ ಮಾಲಿಕರು ಹೈಕೋರ್ಟಿನಲ್ಲಿ ರಿಟ್ ಹಾಕಿ ತಡೆಯಾಜ್ಞೆ ತಂದಿರುವುದನ್ನು ಸರ್ಕಾರ ಕೂಡಲೇ ತೆಗೆದು ಹಾಕಿ ಬೆಂಗಳೂರು ಕೈಗಾರಿಕಾ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಇರುವ ಮಂಗಳೂರು ಹಂಚು ಕಾರ್ಮಿಕರ ಬೇಡಿಕೆ ಕುರಿತು ಹಾಗೂ ಮಂಗಳೂರಿನಲ್ಲಿ ತಿಂಗಳಿಗೆ ಕನಿಷ್ಠ 5 ದಿನ ಕೈಗಾರಿಕಾ ನ್ಯಾಯಾಲಯ ಕ್ಯಾಂಪ್ ಮಾಡಬೇಕು ಮುಂತಾದ ಬೇಡಿಕೆಗಳ ಕುರಿತು ಸಮಾವೇಶ ನಿರ್ಣಯ ಸ್ವೀಕರಿಸಿ ಹಂಚು ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶವನ್ನು ನಡೆಸಲು ನಿರ್ಣಯ ಅಂಗೀಕರಿಸಲಾಯಿತು.

ಭಗತ್‌ಸಿಂಗ್ ದಿನಾಚರಣೆ

ವಿರಾಜಪೇಟೆಯ ನೆಹರು ನಗರ ಡಿವೈಎಫ್‌ಐ ಘಟಕದ ಆಶ್ರಯದಲ್ಲಿ ಮಾರ್ಚ್ 27 ರಂದು ಭಗತ್‌ಸಿಂಗ್ ಸ್ಮರಣಾರ್ಥ ಕ್ರೀಡಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವಿರಾಜಪೇಟೆ ಕನ್ನಡ ಭಾರತಿ ಕಾಲೇಜಿನ ಪ್ರಾಂಶುಪಾಲರಾದ ಹೆಚ್. ಕೆ. ಪುಟ್ಟರಾಜು ರವರು ಉದ್ಘಾಟಿಸಿ ಗ್ರಾಮಾಂತರ

(6ನೇ ಪುಟ ನೋಡಿ)

ಅಪ್ರತಿಮ ಕ್ರಾಂತಿಕಾರನ ಜೊತೆಗೂಡಿದ ಅದಮ್ಯ ಚೇತನ

ದೀರ್ಘ ದಿನಗಳಿಂದ ಅನಾರೋಗ್ಯದಿಂದ ಬಳಲಿದ ಒಡನಾಡಿ ಲೀಲಾ ಸುಂದರಯ್ಯನವರು ತಮ್ಮ 78ನೇ ವಯಸ್ಸಿನಲ್ಲಿ ಕಳೆದ ಮಾರ್ಚ್ 21 ರಂದು ವಿಜಯವಾಡದಲ್ಲಿ ನಿಧನರಾದರು. ಅವರ ಹುಟ್ಟು 1912 ಅಕ್ಟೋಬರ್ 16 ರಂದು ಆಯಿತು. ಯೌವನಕ್ಕೆ ಕಾಲಿಟ್ಟ ನಂತರದ ತಮ್ಮ ಸಂಪೂರ್ಣ ಬದುಕನ್ನು ಕ್ರಾಂತಿಕಾರೀ ಚಳವಳಿಗಾಗಿ ಮೀಸಲಿಟ್ಟ ಒಡನಾಡಿ; ಸಣ್ಣ ಪ್ರಾಯದಿಂದಲೇ ರಾಷ್ಟ್ರೀಯ ಚಳುವಳಿಯೆಡೆಗೆ ಆಕರ್ಷಿತರಾಗಿದ್ದರು. 1930–31ರ ಅಸಹಕಾರ ಚಳುವಳಿಗೆ ದುಮುಕುವುದರೊಂದಿಗೆ ಈ ಧೀರ ವನಿತೆಯ ಹೋರಾಟದ ಬದುಕಿಗೆ ನಾಂದಿ ಹಾಡಲಾಗಿತ್ತು.

ಅವರ ಹುಟ್ಟು ಕಮ್ಯೂನಿಸ್ಟ ಕುಟುಂಬವೊಂದರಲ್ಲಾಗಿತ್ತು. ಅವರ ತಂದೆಯನ್ನು ಸಹವರ್ತಿಗಳೆಲ್ಲಾ ಪ್ರೀತಿಯಿಂದ ದಾದಾ ಎಂದು ಕರೆಯುತ್ತಿದ್ದರು. ಅವರು ಮತ್ತು ತಾಯಿ ಕಲ್ಯಾಣಿ ಸೈದರೂ ಬಾಂಬೆಯ ಪಕ್ಷದ ಕಛೇರಿಯಲ್ಲಿ ಪೂರ್ಣ ಕಾಲದ ಕಾರ್ಯಕರ್ತರಾಗಿದ್ದರು. ಕೇಂದ್ರ ಸಮಿತಿ ಕಛೇರಿಯ ಪೂರ್ಣ ಜವಾಬ್ದಾರಿ ಲೀಲಾರವರ ತಾಯಿಯ ಮೇಲಿತ್ತು; ಇವರ ಹಿರಿಯ ಸಹೋದರಿ 'ದಾಲ್ ಪದ್' ರವರೂ ಪಕ್ಷದ ಕಾರ್ಯಕರ್ತೆಯಾಗಿದ್ದರು. ತಂದೆ 'ದಾದಾ'ರವರು ಸೇವಾದಳ್ ಪ್ರಶಿಕ್ಷಕರಾಗಿದ್ದರು. ಅವರು ಗಂಡು ಮಕ್ಕಳನ್ನು ಸೇರಿಸಿಕೊಂಡು, ಲೀಲಾರವರನ್ನೊಳಗೊಂಡ ಹೆಣ್ಣುಮಕ್ಕಳನ್ನು ಸಂಘಟಿಸಿ ಶಾಲಾ ಕಾಲೇಜುಗಳನ್ನು ಸಂದರ್ಶಿಸಿ ವಿದ್ಯಾರ್ಥಿಗಳಿಗೆ ವಿದ್ಯಾಲಯಗಳನ್ನು ಬಹಿಷ್ಕರಿಸಲು ಕರೆಕೊಡುತ್ತಿದ್ದರು.

ಹೀಗೆ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಲೀಲಾ ಬಂಧಿತರಾದರು. ಮತ್ತು ಆರು ತಿಂಗಳ ಕಾರಾಗೃಹವಾಸ ಅನುಭವಿಸಬೇಕಾಯಿತು.

ಪದವೀದರೆಯಾದ ನಂತರ ಎರಡನೇ ವಿಶ್ವ ಯುದ್ಧದ ಮೊದಲ ಹಂತದ ವರ್ಷಗಳಲ್ಲಿ ಇವರು ಬ್ಯಾಂಕ್ ಆಫ್ ಇಂಡಿಯಾದಲ್ಲಿ ಸ್ವಲ್ಪ ಕಾಲ ಕಾರ್ಯ ನಿರ್ವಹಿಸಿದರು, ಅದರೊಂದಿಗೆಯೇ ಪಕ್ಷದೊಂದಿಗಿನ ಸಂಬಂಧವನ್ನು ಉತ್ತಮಪಡಿಸಿಕೊಂಡು ಬಂದರು, ಕಮ್ಯೂನಿಸ್ಟ್ ಪಕ್ಷವನ್ನು ನಿಷೇಧಿಸಿದ್ದ ಸಮಯವಾದ್ದರಿಂದ ಒಬ್ಬ ಭೂಗತ ಕಾರ್ಯಕರ್ತೆಯಾಗಿ ಪಕ್ಷದ ಕೆಲಸಗಳನ್ನು ಮಾಡುತ್ತಿದ್ದರು. ಕಾ॥ ಪಿ. ಸುಂದರಯ್ಯನವರೊಂದಿಗೆ ಇವರ ಪರಿಚಯವಾಗಿದ್ದು ಇದರ ನಂತರವಾಗಿತ್ತು. ಇವರಿಗೆ ಪಕ್ಷದ ಸದಸ್ಯತ್ವ ದೊರೆತದ್ದೂ 1942 ರಲ್ಲಿ.

ಪಕ್ಷದ ಮೇಲಿನ ನಿಶೋಧವನ್ನು ರದ್ದುಗೊಳಿಸಿದ ನಂತರ ಪಕ್ಷದ ಕೇಂದ್ರ ಸಮಿತಿಯ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಪೂರ್ಣ ಕಾಲದ ಕಾರ್ಯಕರ್ತರ ಅತ್ಯವಶ್ಯಕತೆಯಿದ್ದ ಸಮಯದಲ್ಲಿ ಅಂದಿನ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾ॥ ಪಿ. ಸಿ. ಜೋಶಿಯವರ ಉಪದೇಶದ ಪ್ರಕಾರ ಕಾ॥ ಲೀಲ ತನ್ನ ಉದ್ಯೋಗವನ್ನು ತೊರೆದು ಪಕ್ಷದ ಪೂರ್ಣಕಾಲದ ಕಾರ್ಯಕರ್ತೆಯಾಗಿದ್ದರು; ಮತ್ತು ಕೇಂದ್ರ ಸಮಿತಿಯ ಆರ್ಥಿಕ ವ್ಯವಸ್ಥೆಯ ಜವಾಬ್ದಾರಿಗಳನ್ನು ವಹಿಸಿಕೊಂಡರು.

1943 ರಲ್ಲಿ ಬಾಂಬೆಯಲ್ಲಿ ಸೇರಿದ ಪಕ್ಷದ ಒಂದನೇ ಅಧಿವೇಶನದಲ್ಲಿ ಮಂಡಿಸಬೇಕಾಗಿದ್ದ ದಸ್ತಾವೇಜುಗಳನ್ನು ತಯಾರು ಮಾಡುವ ಜವಾಬ್ದಾರಿ ಕಾಂ॥ ಪಿ. ಸುಂದರಯ್ಯನವರಿಗಿತ್ತು. ಈ ಒಡನಾಡಿ ರಾತ್ರಿ ಬಹಳ ಹೊತ್ತಿನವರೆಗೂ ಅವುಗಳನ್ನು ಬರೆದು ತಯಾರು ಮಾಡುತ್ತಿದ್ದರು. ಹೀಗೆ ತಯಾರುಮಾಡುತ್ತಿದ್ದ ಗೊತ್ತುವಳಿಗಳ ನಕಲುಗಳನ್ನು ಆಗಾಗಲೇ ಕಾಂ॥ ಲೀಲ ತಯಾರುಮಾಡುತ್ತಿದ್ದರು. ಹೀಗೆ ಅವರಿಬ್ಬರೂ ಸಮಾನ ಹಿತಕ್ಕಾಗಿ ಅರ್ಪಣಾ ಮನೋಭಾವದಿಂದ ದಿನ ರಾತ್ರಿಗಳು ಒಂದಾಗಿ ಕಾರ್ಯ ನಿರ್ವಹಿಸಿದರು; ಒಂದು ಸಮಾನ ಹಿತವನ್ನು ಮುಂದಿಟ್ಟುಕೊಂಡು ಸಮಾನ ಮನೋಭಾವದೊಂದಿಗೆ ಒಟ್ಟಾಗಿ ಕಾರ್ಯವೆಸಗುವಿಕೆಯಿಂದಾಗಿ ಪರಿಸರ ಅರಿತುಕೊಳ್ಳಲು ಮತ್ತು ಅವರಿಬ್ಬರನ್ನು ಸನಿಹಕ್ಕೆ ತರಲು ಸಂದರ್ಭವುಂಟುಮಾಡಿತು; 1943 ಫೆ. 27 ರಂದು ಅವರು ಪರಸ್ಪರ ವಿವಾಹವಾದರು.

ಈ ಮದುವೆ ಲೀಲಾರವರ ಸಂಬಂಧಿಕರಾಗಿದ್ದ ಎ.ಎಸ್.ಆರ್. ಚಾರಿಯವರ ಮನೆಯಲ್ಲಿ ನಡೆದಿತ್ತು; ಅಂದಿನಿಂದ ಲೀಲ ಕಾಂ. ಪಿ.ಎಸ್.ರವರ ಹೋರಾಟದ ಸಂಗಾತಿಯಾಗಿ, ಶಿಸ್ತುಬದ್ಧಳಾದ ಒಬ್ಬ ಪಕ್ಷದ ಕಾರ್ಯಕರ್ತೆಯೂ ಆಗಿ ದುಡಿದು ಬಂದರು; ಒಪ್ಪಿಸುವ ಜವಾಬ್ದಾರಿಗಳನ್ನು ಶ್ರದ್ಧೆಯಿಂದ ವಹಿಸಿಕೊಂಡು ನಿರ್ವಹಿಸುತ್ತಿದ್ದರು; ತೆಲಂಗಾಣ ಹೋರಾಟದ ಸಮಯದಲ್ಲಿ ಆರು ವರ್ಷಗಳ ಕಾಲ ಇವರು ಭೂಗತರಾಗಬೇಕಾಯಿತು.

ಪಕ್ಷದ ಚಟುವಟಿಕೆಗಳ ಮಧ್ಯೆ— ಅನೇಕ ಭಾಷೆಗಳನ್ನು ಅವರು ಕಲಿತುಕೊಂಡರು. ಮಾತೃಭಾಷೆ ಮರಾಠಿಯಾಗಿತ್ತು; ಪದವೀಧರೆಯಾಗಿದ್ದರಿಂದ ಇಂಗ್ಲೀಷನ್ನೂ ಬಲ್ಲವರಾಗಿದ್ದರು, ಇವುಗಳಲ್ಲದೆ ಹಿಂದಿ, ಉರ್ದು, ತೆಲುಗು, ಮಲಯಾಳಂ ಮುಂತಾದ ಭಾಷೆಗಳನ್ನು ಅವರು ಸ್ವಪ್ರಯತ್ನದಿಂದ ಸ್ವಂತ ಮಾಡಿಕೊಂಡರು. ವಿವಿಧ ಭಾಷೆಗಳಿಗೆ ಭಾಷಾಂತರಿಸಲು ಮತ್ತು ಲೇಖನಗಳನ್ನು ಬರೆಯಲು ಈ ಬಹುಭಾಷಾಜ್ಞಾನವನ್ನು ಅವರು ಉಪಯೋಗಿಸಿಕೊಂಡರು. ಆದಿವಾಸಿಗಳ ಜೀವನ ಕುರಿತು ಗೋದಾವರಿಪರುಳೇಕರ್‌ರವರು ಮರಾಠಿಯಲ್ಲಿ ಬರೆದ ಪುಸ್ತಕದ ಮತ್ತು ಸುಧಾಂಶುದಾಸ್ ಗುಪ್ತರವರು ಬಂಗಾಳಿಯಲ್ಲಿ ಬರೆದ ಕಾರಗರ ಕಮ್ಯುನಿಸ್ಟ್ ಹಬರ್ ಕಹಿನಿಯ ಇಂಗ್ಲಿಷ್ ಭಾಷಾಂತರಗಳು ಅವರ ಭಾಷಾಂತರಗಳಲ್ಲಿ ಪ್ರಮುಖವಾಗಿವೆ.

ಇವರು ಗಾಯನ ಮತ್ತು ನೃತ್ಯವನ್ನು ಅಭ್ಯಸಿಸಿದ್ದರಲ್ಲದೆ ಈ ವಿಷಯಗಳಲ್ಲಿ ಹೆಚ್ಚಿನ ಪಾಂಡಿತ್ಯ ಪಡೆದಿದ್ದುದರಿಂದ ಇವರು ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಶನ್‌ನ ಸದಸ್ಯೆಯಾಗಿದ್ದರು. ಮತ್ತು ಬಂಗಾಳ ಮತ್ತಿತರ ಕಡೆಗಳಲ್ಲಿ ಹಲವಾರು ಸಾಂಸ್ಕೃತಿಕ ಚಳುವಳಿಗಳಲ್ಲಿ ಭಾಗವಹಿಸಿದ್ದರು.

ಪಕ್ಷದ ಹಲವು ಪತ್ರಿಕೆಗಳು ಮತ್ತು ಅನುಕಾಲಿಕಗಳೊಂದಿಗೆ ಅವರಿಗೆ ಹತ್ತಿರದ ನಂಟು ಇತ್ತು. ತೆಲಂಗಾಣದ ಕಾಡುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಕ್ಷದ ಪತ್ರಿಕೆಯಾದ 'ಪೀಪಲ್ಸ್ ವಾರ್'ನ ಕೇಂದ್ರವನ್ನು ನಾಶ ಮಾಡಲು ಪಕ್ಷದ ಶತ್ರುಗಳು ಯೋಜನೆಯನ್ನು ಹಾಕಿಕೊಂಡಾಗ ಅದರ ರಕ್ಷಣೆಗೆ ಬಂದೂಕೆತ್ತಿ ನಿಂತವರ ಮುಂಚೂಣಿಯಲ್ಲಿ ಕಾಂ॥ ಲೀಲಾರವರೂ ಇದ್ದರು. 1968ರಲ್ಲಿ 'ವಿಶ್. ಸಾತ್ತ್' ಎಂಬ ಬಂಗಾಳಿ ಮಾಸಪತ್ರಿಕೆ ಆರಂಭವಾದಾಗ ಅದರ ವ್ಯವಸ್ಥಾಪಕರಾಗಿ ಕಾಂ॥ ಲೀಲ ಕೆಲಸ ನಿರ್ವಹಿಸಿದ್ದರು, ಹಿಂದಿ ಪತ್ರಿಕೆಯಾದ 'ಸ್ವಾಧೀನತಾ'ದೊಂದಿಗೂ ಕಾ। ಲೀಲಾರವರಿಗೆ ಹತ್ತಿರದ ಸಂಪರ್ಕವಿತ್ತು.

ಕಾಂ॥ ಸುಂದರಯ್ಯ 1985ರಲ್ಲಿ ತೀರಿಕೊಂಡರು. ಅದರ ನಂತರ ಮಾರಕವಾದ ಕ್ಯಾನ್ಸರ್ ರೋಗದಿಂದ ನರಳುತ್ತಿದ್ದರೂ ಪಕ್ಷದ ತೆಲುಗು ಮುಖವಾಣಿಯಾದ 'ಪ್ರಜಾಶಕ್ತಿ'ಯ ಸಂಪಾದಕೀಯ ಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಾ ಬಂದರು; ಬಂಗಾಳಿ ಪತ್ರಿಕೆಯಾದ 'ಗಣಶಕ್ತಿ'ಯಿಂದ ಮುಖ್ಯ ಸುದ್ದಿಗಳನ್ನು ಮತ್ತಿತರೆಗಳನ್ನು 'ಪ್ರಜಾಶಕ್ತಿ'ಗಾಗಿ ತೆಲುಗಿಗೆ ಭಾಷಾಂತರಿಸುವುದರಲ್ಲಿ ಅವರು ಅತೀವ ತತ್ಪರರಾಗಿದ್ದರು.

ಒಡನಾಡಿಗಳಾದ ಸುಂದರಯ್ಯ ಮತ್ತು ಲೀಲಾರವರು ಇಂದು ನಮ್ಮೊಂದಿಗಿಲ್ಲ. ಕ್ರಾಂತಿಕಾರೀ ಚಳವಳಿಗಾಗಿ ಸ್ವಯಂ ಅರ್ಪಿಸಲ್ಪಟ್ಟ ಆ ಆದರ್ಶ ದಂಪತಿಗಳ ಅರ್ಪಣ ಮನೋಭಾವ ಕಾರ್ಮಿಕ ಮತ್ತಿತರೆ ದುಡಿಯುವ ವರ್ಗದೊಂದಿಗೆ ಅವರಿಗಿದ್ದ ನಿಷ್ಕಳಂಕವಾದ ಮಮತೆ ಮತ್ತು ಸ್ನೇಹ, ಅವರ ಸರಳ ಜೀವನ, ಜ್ಞಾನದಾಹ—ಇವುಗಳೆಲ್ಲಾ ಯುವ ಜನಾಂಗಕ್ಕೆ ಆವೇಶದ ಬುಗ್ಗೆ ಮಾತ್ರವಲ್ಲ ಆದರಣೀಯ ಆದರ್ಶಗಳೂ ಆಗಿವೆ.

ಇ. ಕೆ. ಎನ್. ರಾಜನ್, ಲತೀಫ್

ಭಾರತ್ ಬಂದ್: ಮುಂದೆಸಾಗಿ

(1ನೇ ಪುಟದಿಂದ)

ಪಿ. ಬಿ. ಮಾರ್ಚ್, 15ರ ಭಾರತ ಬಂದನ್ನು ವಿಮರ್ಶಿಸಿ, ಎಲ್ಲಾ ವಿರೋಧ ಪಕ್ಷಗಳು ಭಾಗವಹಿಸಿದ್ದರ ಬಗ್ಗೆ ತೃಪ್ತಿವ್ಯಕ್ತಪಡಿಸಿದೆ, ಬಂದ್ ರಾಜೀವ್‌ಗಾಂಧಿ ಸರ್ಕಾರದ ವಿರುದ್ಧ ಜನರ ಐಕ್ಯ ವಿರೋಧವನ್ನು ಸೂಚಿಸುತ್ತದೆ. ಬೀದಿಗಳಲ್ಲಿ ಸೂಚಿತವಾದ ಈ ಐಕ್ಯತೆ 59ನೇ ತಿದ್ದುಪಡಿಯನ್ನು ಪಾರ್ಲಿಮೆಂಟಿನಲ್ಲಿ ಬಲವಾಗಿ ವಿರೋಧಿಸುವಲ್ಲಿ ವ್ಯಕ್ತವಾಗಿದೆ, ಪಿ ಬಿ. ಬಂದ್ ಯಶಸ್ವಿಗಾಗಿ ಶ್ರಮಿಸಿದ ನಮ್ಮ ಪಕ್ಷದ ಮತ್ತು ಇತರ ಪಕ್ಷಗಳ (ಅದರಲ್ಲೂ ಎಡರಂಗ ಪಕ್ಷಗಳ ಕಾರ್ಯಕರ್ತರನ್ನು ಅಭಿನಂದಿಸುತ್ತಾ ಈ ಸಫಲತೆಯ ಆಧಾರದ ಮೇಲೆ ರಾಜೀವ ಸರ್ಕಾರವನ್ನು ಉರುಳಿಸುವ ಚಳುವಳಿ ಯೋಜನೆ ರೂಪಿಸಲು ಪಿ.ಬಿ. ಕರೆ ಕೊಟ್ಟಿದೆ.

ಸಿರಸಿ ಪುರಸಭಾಧ್ಯಕ್ಷ ಉಪಾಧ್ಯಕ್ಷರ ವಜಾಕ್ಕೆ ಒತ್ತಾಯ

ಶಿರ್ಶಿ ಪುರಸಭಾಧ್ಯಕ್ಷ ಎಸ್.ಪಿ. ರೇವಣಕರರವರು ಮಿತಿಮೀರಿದ ಭ್ರಷ್ಟಾಚಾರ ಎಸಗಿರುವುದರಿಂದ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೂಡಲೇ ವಜಾಗೊಳಿಸಬೇಕೆಂದು ಸಿ.ಪಿ.ಐ. (ಎಂ) ಶಿರಸಿ ಘಟಕ ಡೆಪ್ಯೂಟಿ ಕಮೀಶನರ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್‌ರ್ ರವರನ್ನು ಒತ್ತಾಯಿಸಿದೆ.

ಪುರಸಭೆಯಿಂದ ದಲಿತರಿಗೆ ಸಿಗಬೇಕಾದ ನೆರವಿನಲ್ಲಿ 7ಸಾವಿರ ರೂ; ದುರುಪಯೋಗ, ಮರ ಹರಾಜು ಮಾಡುವಲ್ಲಿ 35ಸಾವಿರ ನಷ್ಟ ಮಾಡಿರುವುದು ಸೈಟುಗಳ ಹಂಚಿಕೆಯಲ್ಲಿ ಸ್ವಜನ ಪಕ್ಷಪಾತ, ನೀರು ಸರಬರಾಜಿನಲ್ಲಿ ಸಾರ್ವಜನಿಕರಿಗೆ ತಾರತಮ್ಯ, ಬೀದಿದೀಪ, ಸ್ವಚ್ಛತೆ, ಹೋಟೆಲ್ ತಿಂಡಿ ಬೆಲೆ ಏರಿಕೆ ಮುಂತಾದ ಜನರನ್ನು ಬಾಧಿಸುತ್ತಿರುವ ಸಮಸ್ಯೆಗಳ ಕುರಿತು ಉದಾಸೀನ ಹಾಗೂ ನಿರ್ಲಕ್ಷದಿಂದ ಕಂಡು ಭ್ರಷ್ಟಾಚಾರದಲ್ಲಿ ಮುಳುಗಿರುವುದನ್ನು ಹೇಳಿಕೆಯಲ್ಲಿ ತೀವ್ರವಾಗಿ ಖಂಡಿಸಲಾಗಿದೆ.

ಜಿಲ್ಲಾಧಿಕಾರಿಗಳು ಡೆಪ್ಯೂಟಿ ಕಮಿಷನರ್‌ರವರು ಕೂಡಲೇ ಮಧ್ಯೆ ಪ್ರವೇಶಿಸಿ ನಡೆಯುತ್ತಿರುವ ಅವ್ಯವಹಾರವನ್ನು ತಡೆಗಟ್ಟಬೇಕೆಂದು ಒತ್ತಾಯಿಸಲಾಗಿದೆ.

ಮೇ ತಿಂಗಳಲ್ಲಿ ಪುರಸಭಾಧ್ಯಕ್ಷ, ಉಪಾಧ್ಯಕ್ಷರ ವಜಾಕ್ಕೆ ಒತ್ತಾಯಿಸಿ ಸಿರ್ಸಿ ಜನತೆಯನ್ನು ಸಂಘಟಿಸಿ ಹೋರಾಟ ರೂಪಿಸಲು ಸಿ.ಪಿ.ಐ (ಎಂ) ಪಕ್ಷ ನಿರ್ಧರಿಸಿದೆ ಎಂದು ಪುರಸಭಾ ಸದಸ್ಯ ಕಾ॥ ಎಂ. ಎಸ್. ಧಾರೇಶ್ವರ ಅವರು ಹಾಗೂ ಸಿರ್ಸಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾ॥ ಪಿ.ಜಿ. ಮಶಾಲ್ದಿಯವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಖಿಲ ಭಾರತ ಪ್ರತಿಭಟನಾ ದಿನ

ಕೇಂದ್ರದ ರಾಜೀವ್‌ಗಾಂಧಿ ಸರ್ಕಾರ ತರುತ್ತಿರುವ ಕಾರ್ಮಿಕ ಕಾಯಿದೆಗಳ ಕರಾಳ ತಿದ್ದುಪಡಿಗಳನ್ನು ವಿರೋಧಿಸಲು ರಾಷ್ಟ್ರೀಯ ಆಂದೋಲನ ಸಮಿತಿ ಅಖಿಲ ಭಾರತ ಪ್ರತಿಭಟನೆ ದಿನ ನೀಡಿದ ಕರೆಯಂತೆ ಏಪ್ರಿಲ್ 18 ರಂದು ಉಡುಪಿಯಲ್ಲಿ ವಿವಿಧಕಾರ್ಮಿಕ ಸಂಘಗಳು ಸಿ.ಐ.ಟಿ.ಯು. ನೇತೃತ್ವದಲ್ಲಿ ಮೆರವಣಿಗೆ ನಡೆಸಿ ಬಹಿರಂಗಸಭೆ ನಡೆಸಲಾಯಿತು.

ಕಾರ್ಮಿಕ ಸಂಘಗಳ ಅಂತರಿಕ ವ್ಯವಹಾರಗಳಲ್ಲಿ ಕೈ ಹಾಕಲು ಸರ್ಕಾರದ ಅಧಿಕಾರಿಗಳಿಗೆ ಅವಕಾಶ ನೀಡುವ, ಕೈಗೊಂಬೆ ಸಂಘಗಳನ್ನು ಕಾರ್ಮಿಕರ ಮೇಲೆ ಹೇರಲಿರುವ ಕಾರ್ಮಿಕ ವಿವಾದಗಳು ವರ್ಷಗಟ್ಟಲೆ ಕೋರ್ಟುಗಳಲ್ಲಿ ಮೂಲಕ ವಿಳಂಭ, ಮುಷ್ಕರ ಹಕ್ಕುಗಳನ್ನು ನಿರಾಕರಿಸುವ ಮುಂತಾದ ಕ್ರಮಗಳನ್ನು ಒಳಗೊಂಡಿರುವ ತಿದ್ದುಪಡಿ ಕಾಯಿದೆ ಕಾರ್ಮಿಕರನ್ನು ಬಂಡವಾಳ ಶಾಹಿಗಳ ಗುಲಾಮರನ್ನಾಗಿಸುವಂತಹ ತಿದ್ದುಪಡಿಗಳಾಗಿವೆ. ಕೇಂದ್ರ ಸರ್ಕಾರದ ಇಂತಹ ಕಾರ್ಮಿಕ ವಿರೋದಿ ಕರಾಳ ಶಾಸನವನ್ನು ಎದುರಿಸಲು ಕಾರ್ಮಿಕ ವರ್ಗ ಎಚ್ಚೆತ್ತು ಹೋರಾಟ ನಡೆಸಬೇಕೆಂದು ಬಹಿರಂಗಸಭೆಯನುದ್ದೇಶಿಸಿ ಮಾತನಾಡಿದ ಕಾ॥ ದೇವಿಡ್ ಎ. ಕರ್ಕಡ, ಸಂಜೀವನಾಯ್ಕ, ಎನ್. ಸಾಧು ಅಮೀನ ರವರುಗಳು ಕರೆ ನೀಡಿದರು.

Printed & Published by P. Ramachandra Rao on be half of the Communist Party of India [Maxist] Karnataka State Committe, K.V. Temple Street, Sultanpet, Bangalore-560053 Editorial and Managerial Office: L-56 K.V.Temple Street, Sultanpet B-53
Phone: 75331 ARASA Mudrana B-40 Editor: P. Ramachandra Rao Managing Editor: N.K. Upadhyaya